ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಕನ್ನಡ ಮಾಸಪತ್ರಿಕೆ

# ಸಹಕಾರ

ಮಾಸ ಪತ್ರಿಕೆ

ಸಂಪುಟ : 4 । ಸಂಚಿಕೆ : 8 । ಆಗಸ್ಟ್-2022 । ಪುಟಗಳು : 20 । ಬೆಲೆ : 25/-

ಕರ್ನಾಟಕ ರಾಜ್ಯ
ಸಹಕಾರ ಪತ್ತಿನ ಸಂಘಗಳ
ಮಹಾಮಂಡಳದ ಪ್ರಕಟಣೆ



ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ
ಅಧ್ಯಕ್ಷರು

ಸ್ವಾತಂತ್ರ್ಯದ
ಅಮೃತ ಮಹೋತ್ಸವ



ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ
ಉಪಾಧ್ಯಕ್ಷರು

## 75ನೇ ಭಾರತ ಸ್ವಾತಂತ್ರ್ಯೋತ್ಸವ ಸಂಭ್ರಮ

### ಅಮೃತ ಮಹೋತ್ಸವ ಆಚರಣೆಯ ಶುಭಾಶಯಗಳು

ಆಡಳಿತ ಮಂಡಳಿ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು.

## ದೇಶದ 15ನೇ ರಾಷ್ಟ್ರಪತಿಯಾಗಿ ಶ್ರೀಮತಿ ದ್ರೌಪದಿ ಮುರ್ಮು ಅಧಿಕಾರ ಸ್ವೀಕಾರ



## ಕಟ್ಟಡ ದೇಣಿಗೆ ಸಲ್ಲಿಕೆ




ಶ್ರೀ ಸಾಲೇಶ್ವರ ಅರ್ಬನ್ ಕೋ-ಆಪರೇಟಿವ್ ಸೊಸೈಟಿ ಲಿ., ರಾಣೆಬೆನ್ನೂರು ಈ ಸಹಕಾರ ಸಂಘದ ಅಧ್ಯಕ್ಷರಾದ ಶ್ರೀ ಚಂದ್ರಶೇಖರ್ ರೇವಣಪ್ಪ ತೆಂಬದ್ ಹಾಗೂ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ವೀರಣ್ಣ ಗುರುಶಾಂತಪ್ಪ ಕಾಯಕದ್ ಅವರುಗಳು ಪತ್ತಿನ ಸಹಕಾರ ಸಂಘಗಳ ಮಹಾಮಂಡಳಕ್ಕೆ ಭೇಟಿ ನೀಡಿ ಮಹಾಮಂಡಳದ ಅಧ್ಯಕ್ಷರಾದ ಶ್ರೀಮತಿ ಕೆ.ಲಲಿತ ಜಿ.ಟಿ.ದೇವೇಗೌಡರವರಿಗೆ ಕಟ್ಟಡ ದೇಣಿಗೆಯ ಚೆಕ್ಕನ್ನು ಸಲ್ಲಿಸಿದರು. ಈ ಸಂದರ್ಭದಲ್ಲಿ ಪತ್ತಿನ ಮಹಾಮಂಡಳದ ಉಪಾಧ್ಯಕ್ಷರು, ಆಡಳಿತಮಂಡಳಿ ಸದಸ್ಯರು, ಮುಖ್ಯಕಾರ್ಯನಿರ್ವಹಣಾಧಿಕಾರಿ(ಪ್ರ) ರವರು ಉಪಸ್ಥಿತರಿದ್ದರು.

## ಸಹಕಾರ ಸಂಘಗಳ ನಿಬಂಧಕರಾಗಿ ಕ್ಯಾಪ್ಟನ್ ಕೆ. ರಾಜೇಂದ್ರ ಅಧಿಕಾರ ಸ್ವೀಕಾರ– ಅಭಿನಂದನೆ ಸಲ್ಲಿಕೆ



ಕರ್ನಾಟಕ ರಾಜ್ಯ ಸಹಕಾರ ಸಂಘಗಳ ನಿಬಂಧಕರಾಗಿ ಅಧಿಕಾರ ಸ್ವೀಕರಿಸಿರುವ ಹಿರಿಯ ಐಎಎಸ್ ಅಧಿಕಾರಿ ಕ್ಯಾಪ್ಟನ್ ಕೆ. ರಾಜೇಂದ್ರರವರನ್ನು ಪತ್ತಿನ ಸಹಕಾರ ಸಂಘಗಳ ಮಹಾಮಂಡಳದ ನಿರ್ದೇಶಕರಾದ ಡಾ||ಸಂಜಯ ಪಿ.ಹೊಸಮಠರವರು ಹಾಗೂ ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರ) ಶ್ರೀಮತಿ ಆಶಾಲತಾ.ಪಿ ರವರು ಭೇಟಿ ಮಾಡಿ ಅಭಿನಂದಿಸಿ ಶುಭ ಕೋರಿದರು.

# ರೂಪಾಯಿ ಮೌಲ್ಯ ನಿರಂತರ ಕುಸಿತ:
## ಪ್ರಸ್ತುತ ಬಿಕ್ಕಟ್ಟನ್ನು ನಿಭಾಯಿಸಲು ಬೇಕಾದಷ್ಟು ಮೀಸಲು ಇದೆ: ಆರ್‌ಬಿಐ



ಡಾಲರ್ ಎದುರು ರೂಪಾಯಿ ನಿರಂತರವಾಗಿ ಕುಸಿತ ಕಾಣುತ್ತಿದೆ. ಈ ಬಗ್ಗೆ ಪ್ರತಿಕ್ರಿಯೆ ನೀಡಿದ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ (ಆರ್‌ಬಿಐ) ಗವರ್ನರ್ ಶಕ್ತಿಕಾಂತ್ ದಾಸ್, "ರೂಪಾಯಿ ಕುಸಿತದ ವಿಚಾರದಲ್ಲಿ ಆರ್‌ಬಿಐ ಯಾವುದೇ ಸಹಿಷ್ಣುತೆ ಹೊಂದಿಲ್ಲ. ರೂಪಾಯಿ ತನ್ನ ಮೌಲ್ಯವನ್ನು ಮರುಪಡೆಯುವವರೆಗೂ ವಿದೇಶಿ ವಿನಿಮಯ ಮಾರುಕಟ್ಟೆಯಲ್ಲಿ ತೊಡಗಿರುತ್ತದೆ," ಎಂದು ಹೇಳಿದ್ದಾರೆ.

ರೂಪಾಯಿ ಇಷ್ಟೇ ಮೌಲ್ಯವನ್ನು ಹೊಂದಿರಬೇಕು ಎಂದು ಭಾರತೀಯ ರಿಸರ್ವ್ ಬ್ಯಾಂಕ್ ಯಾವುದೇ ನಿರ್ದಿಷ್ಟ ಮಟ್ಟವನ್ನು ಹೊಂದಿಲ್ಲ. ಮಾರುಕಟ್ಟೆಯಲ್ಲಿ ಡಾಲರ್‌ಗಳ ನಿಜವಾದ ಕೊರತೆ ಉಂಟಾಗಿದೆ. ಆದ್ದರಿಂದ ಸೆಂಟ್ರಲ್ ಬ್ಯಾಂಕ್ ಡಾಲರ್‌ಗಳನ್ನು ಪೂರೈಕೆ ಮಾಡುತ್ತಿದೆ ಎಂದು ಸ್ಪಷ್ಟಪಡಿಸಿದ್ದಾರೆ. ಪ್ರಸ್ತುತ ಪರಿಸ್ಥಿತಿಗಾಗಿ ಕೇಂದ್ರ ಬ್ಯಾಂಕ್ ತನ್ನ ವಿದೇಶಿ ವಿನಿಮಯ ಸಂಗ್ರಹವನ್ನು ನಿರ್ಮಿಸಿದೆ. ಪ್ರಸ್ತುತ ಬಿಕ್ಕಟ್ಟನ್ನು ನಿಭಾಯಿಸಲು ಬೇಕಾದಷ್ಟು ಮೀಸಲು ಇದೆ ಎಂದು ಹೇಳಿದ್ದಾರೆ.

**ರೂಪಾಯಿ ಮೌಲ್ಯ ಹೇಗಿದೆ?**

ನಿರಂತರವಾಗಿ ಡಾಲರ್ ಎದುರು ಕುಸಿತ ಕಂಡಿದ್ದ ರೂಪಾಯಿ ಕಳೆದವಾರ ಸ್ವಲ್ಪ ಏರಿಕೆ ಕಂಡಿದೆ. ಇದಕ್ಕೂ ಮುಂಚಿನ ವಹಿವಾಟಿನಲ್ಲಿ ಡಾಲರ್ ಎದುರು ರೂಪಾಯಿ ಸಾರ್ವಕಾಲಿಕ ಕುಸಿತವನ್ನು ಕಂಡಿದ್ದು ರೂಪಾಯಿ ಮೌಲ್ಯ 80.06ಕ್ಕೆ ಇಳಿದಿದೆ. ಈ ಹಿಂದೆ ರೂಪಾಯಿ ಮೌಲ್ಯ ಕುಸಿಯುತ್ತಿದ್ದಂತೆ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ರೆಪೋ ದರವನ್ನು ಏರಿಕೆ ಮಾಡಿದೆ. ಇದರಿಂದಾಗಿ ಬಹುತೇಕ ಎಲ್ಲಾ ಬ್ಯಾಂಕ್‌ಗಳು ಸಾಲದ ಬಡ್ಡಿದರವನ್ನು ಕೂಡಾ ಹೆಚ್ಚಳ ಮಾಡಿದೆ. ಹಾಗೆಯೇ ಎಫ್‌ಡಿ ಬಡ್ಡಿ ದರವನ್ನು ಕೂಡಾ ಹೆಚ್ಚಳ ಮಾಡಲಾಗಿದೆ. ಸಾಮಾನ್ಯವಾಗಿ ರೂಪಾಯಿ ಮೌಲ್ಯವು ಕುಸಿತವಾದರೆ ನಮ್ಮ ವೈಯಕ್ತಿಕ ಹಣಕಾಸಿನ ಮೇಲೆಯೂ ಭಾರೀ ಪರಿಣಾಮ ಉಂಟಾಗಲಿದೆ. ರೂಪಾಯಿ ಮೌಲ್ಯ ಕುಸಿತವಾದಂತೆ ಆಮದು ವೆಚ್ಚ ಅಧಿಕವಾಗಲಿದೆ. ಆಮದು ವೆಚ್ಚ ಅಧಿಕವಾದರೆ ಅದರ ಹೊರೆಯು ಜನ ಸಾಮಾನ್ಯರ ಮೇಲೆ ಬೀಳಲಿದೆ.

## ಜಾಹಿರಾತು ಮನವಿ




ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿ ಮಾಸಿಕ ಸಹಕಾರ ಪತ್ರಿಕೆಯನ್ನು ಪ್ರಕಟ ಮಾಡುತ್ತಿದ್ದು, ಪತ್ತಿನ ಸಹಕಾರ ಚಳವಳಿಯ ಪೂರಕ ಚಟುವಟಿಕೆಗಳಿಗೆ ಪ್ರಚಾರ ನೀಡುತ್ತಾ ಬರುತ್ತಿದೆ. ರಾಜ್ಯದ ಪತ್ತಿನ ಸಹಕಾರ ಸಂಘಗಳು ತಮ್ಮ ಕಾರ್ಯಪ್ರಗತಿಯ ವಿವರಗಳನ್ನು ಜಾಹಿರಾತು ಮೂಲಕ ಪ್ರಕಟಿಸಿದ್ದಲ್ಲಿ ಉತ್ತಮ ಪ್ರಚಾರ ಪಡೆದುಕೊಳ್ಳಲು ಸಾಧ್ಯವಿದೆ. ಈ ನಿಟ್ಟಿನಲ್ಲಿ ಪತ್ತಿನ ಸಹಕಾರ ಸಂಘಗಳ ಮಹಾಮಂಡಳವು ರಿಯಾಯಿತಿ ದರದಲ್ಲಿ ಜಾಹಿರಾತುಗಳನ್ನು ಪ್ರಕಟಿಸಲು ಉತ್ಸುಕವಾಗಿದೆ. ಸಹಕಾರ ಸಂಸ್ಥೆಗಳು ಸಂಪೂರ್ಣ ಮಾಹಿತಿಗಳೊಂದಿಗೆ ಜಾಹಿರಾತುಗಳನ್ನು ನೀಡಲು ಕೋರಿದೆ. ಜಾಹಿರಾತು ದರಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ದೂರವಾಣಿ ಹಾಗೂ ಮೊಬೈಲ್ ಸಂಖ್ಯೆಗಳಿಗೆ ಸಂಪರ್ಕಿಸಲು ಕೋರಿದೆ.

ಮೊಬೈಲ್ ನಂ. 9008407988,

ದೂರವಾಣಿ : 080 23564444, 23464033, 23464034

ಇ–ಮೇಲ್ : ksccsfltd@gmail.com, info@ksccsf.org

ವೆಬ್‌ಸೈಟ್ : www.ksccsf.org

## ಸಹಕಾರ ವಾರ್ತಾ ಪತ್ರಿಕೆಗೆ ಚಂದಾದಾರರಾಗಲು ಮನವಿ

ಕರ್ನಾಟಕ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಪ್ರಕಟಿಸುತ್ತಿರುವ ಮಾಸಿಕ ಸಹಕಾರ ವಾರ್ತಾ ಪತ್ರಿಕೆಗೆ ಈಗಾಗಲೇ ಚಂದಾದಾರರಾಗಿರುವ ಸದಸ್ಯ ಸಹಕಾರ ಸಂಘಗಳನ್ನು ಹೊರತುಪಡಿಸಿ ಇನ್ನುಳಿದ ಪತ್ತಿನ ಸಹಕಾರ ಸಂಘಗಳು "ಸಹಕಾರ ಮಾಸಿಕ ವಾರ್ತಾ ಪತ್ರಿಕೆ"ಗೆ ಚಂದಾದಾರರಾಗಲು ಈ ಮೂಲಕ ಮನವಿ ಮಾಡಲಾಗಿದೆ.

**– ಸಂಪಾದಕರು**

## ಸಂಪಾದಕೀಯ



**ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ**
ಅಧ್ಯಕ್ಷರು

ಶಾಸಕರಾಗಿ, ಸಚಿವರಾಗಿ, ರಾಜ್ಯಪಾಲರಾಗಿ ಅನುಭವ ಹೊಂದಿರುವ ಮುರ್ಮು ಅವರು, ಮುಂಬರುವ ದಿನಗಳಲ್ಲಿ ರಾಷ್ಟ್ರನಿರ್ಮಾಣಕ್ಕೆ ಹೆಚ್ಚಿನ ಮಾರ್ಗದರ್ಶನ ಮಾಡಿ ಭಾರತವನ್ನು ಮತ್ತಷ್ಟು ಪರಿಣಾಮ ದೇಶವನ್ನಾಗಿ ಮುನ್ನಡೆಸಬಲ್ಲರು ಎಂಬ ವಿಶ್ವಾಸವನ್ನು ನಾವೆಲ್ಲರೂ ಇರಿಸಿಕೊಂಡಿದ್ದೇವೆ.
ದೇಶದ ಆರ್ಥಿಕ–ಸಾಮಾಜಿಕ ಸಬಲೀಕರಣದಲ್ಲಿ ಇಂದಿನ ಕಾಲಮಾನದಲ್ಲಿ ಮಹಿಳೆಯರು ಮುಂಚೂಣಿಯಲ್ಲಿದ್ದಾರೆ. ಆರ್ಥಿಕವಾಗಿ ಸ್ವಾವಲಂಬನೆ ಸಾಧಿಸುತ್ತಿದ್ದಾರೆ.

### 75ನೇ ಭಾರತ ಸ್ವಾತಂತ್ರ್ಯೋತ್ಸವ ಸಂಭ್ರಮ

# ಭಾರತದ ನೂತನ ರಾಷ್ಟಪತಿ ದ್ರೌಪದಿ ಮುರ್ಮು–ಅಭಿನಂದನೆಗಳು



ಭಾರತ ದೇಶ ತನ್ನ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದತ್ತ ಹೆಜ್ಜೆ ಇರಿಸಿರುವಾಗ ದೇಶದ 15ನೇ ರಾಷ್ಟ್ರಪತಿಯಾಗಿ ದೌಪದಿ ಮುರ್ಮು ಅವರು ಜುಲೈ–25ರಂದು ಅಧಿಕಾರ ಸ್ವೀಕರಿಸಿದ್ದಾರೆ. ಅವರಿಗೆ ನಮ್ಮೆಲ್ಲರ ಅಭಿನಂದನೆಗಳು.

ದೇಶದ ಎರಡನೇ ಮಹಿಳಾ ರಾಷ್ಟ್ರಪತಿ ಎಂಬ ಹೆಗ್ಗಳಿಕೆ ಪಡೆದಿರುವ ದ್ರೌಪದಿ ಮುರ್ಮು ಅವರು ಮೂಲತಃ ಒಡಿಶಾ ರಾಜ್ಯದ ಆದಿವಾಸಿ ಮಹಿಳೆ ಎಂಬುದು ಮತ್ತೊಂದು ಗಮನಾರ್ಹ ವಿಚಾರವಾಗಿದೆ. ತಮ್ಮ ಜೀವನದಲ್ಲಿ ಹಲವು ಏಳು–ಬೀಳುಗಳನ್ನು ಕಂಡಿರುವ ಅವರು ಅಪ್ಪಟ ದೇಶ ಪ್ರೇಮಿ.

ಶಾಸಕರಾಗಿ, ಸಚಿವರಾಗಿ, ರಾಜ್ಯಪಾಲರಾಗಿ ಅನುಭವ ಹೊಂದಿರುವ ಮುರ್ಮು ಅವರು ಮುಂಬರುವ ದಿನಗಳಲ್ಲಿ ರಾಷ್ಟ್ರನಿರ್ಮಾಣಕ್ಕೆ ಹೆಚ್ಚಿನ ಮಾರ್ಗದರ್ಶನ ಮಾಡಿ ಭಾರತವನ್ನು ಮತ್ತಷ್ಟು ಪರಿಣಾಮ ದೇಶವನ್ನಾಗಿ ಮುನ್ನಡೆಸಬಲ್ಲರು ಎಂಬ ವಿಶ್ವಾಸವನ್ನು ನಾವೆಲ್ಲರೂ ಇರಿಸಿಕೊಂಡಿದ್ದೇವೆ.

ದೇಶದ ಆರ್ಥಿಕ–ಸಾಮಾಜಿಕ ಸಬಲೀಕರಣದಲ್ಲಿ ಇಂದಿನ ಕಾಲಮಾನದಲ್ಲಿ ಮಹಿಳೆಯರು ಮುಂಚೂಣಿಯಲ್ಲಿದ್ದಾರೆ. ಆರ್ಥಿಕವಾಗಿ ಸ್ವಾವಲಂಬನೆ ಸಾಧಿಸುತ್ತಿದ್ದಾರೆ. ದ್ರೌಪದಿ ಮುರ್ಮು ಅವರ ಆದರ್ಶ ಚಿಂತನೆಗಳು ದೇಶದ ಜನತೆಗೆ, ವಿಶೇಷವಾಗಿ ಯುವಜನರು, ಮಹಿಳೆಯರ ಸಬಲೀಕರಣಕ್ಕೆ ಮತ್ತಷ್ಟು ಪ್ರೇರಣದಾಯಕವಾಗಲಿದೆ ಎನ್ನಬಹುದು.

ಆಗಸ್ಟ್–15, 2022ರಂದು ನಾವೆಲ್ಲರೂ ಭಾರತ ಸ್ವಾತಂತ್ರ್ಯೋತ್ಸವದ 75ನೇ ವರ್ಷದ “ಅಮೃತ ಮಹೋತ್ಸವ”ವನ್ನು ಆಚರಿಸುತ್ತಿರುವುದು ಹೆಮ್ಮೆಯ, ರಾಷ್ಟ್ರಾಭಿಮಾನದ ವಿಚಾರವಾಗಿದೆ.

ಈ ದಿನದಂದು ಪ್ರತಿ ಮನೆ–ಕಟ್ಟಡ–ಕಚೇರಿಗಳ ಮೇಲೆ ತ್ರಿವರ್ಣ ರಾಷ್ಟ್ರಧ್ವಜಾವರೋಹಣ ಮಾಡಿ ಸಂಭ್ರಮಿಸೋಣ. ಈ ಸಂಗತಿ ಎಲ್ಲಾ ಭಾರತೀಯರಿಗೆ ಹೆಮ್ಮೆಯ ಅಭಿಮಾನದ ರಾಷ್ಟ್ರಪ್ರೇಮದ ವಿಚಾರವೂ ಹೌದು.

75ನೇ ಭಾರತ ಸ್ವಾತಂತ್ರ್ಯೋತ್ಸವ ಸಂಭ್ರಮ ಕೇವಲ ಆಚರಣೆಯಾಗದೇ ದೇಶವನ್ನು ಬಲಿಷ್ಠ ರಾಷ್ಟ್ರವನ್ನಾಗಿ ಮಾಡಲು ಹಲವು ಚಿಂತನೆ ದೂರದೃಷ್ಟಿ ಯೋಜನೆಗಳನ್ನು ಹಮ್ಮಿಕೊಂಡು ದೇಶವನ್ನು ಆರ್ಥಿಕ, ಸಾಮಾಜಿಕ ರಂಗ ಸೇರಿದಂತೆ ಎಲ್ಲ ವಲಯಗಳನ್ನು ಸಧೃಡಗೊಳಿಸೋಣ.

**ತಮ್ಮೆಲ್ಲರಿಗೂ 75ನೇ ಸ್ವಾತಂತ್ರ್ಯ ದಿನಾಚರಣೆಯ ಶುಭಾಷಯಗಳು**

**ಜೈ–ಹಿಂದ್....ಜೈ ಸಹಕಾರ..**

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಕನ್ನಡ ಮಾಸಪತ್ರಿಕೆ

ಸಹಕಾರ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

**ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು**

ನಂ. 16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್‌ರಸ್ತೆ,
ಮಲ್ಲೇಶ್ವರಂ, ಬೆಂಗಳೂರು – 560003
ದೂರವಾಣಿ ಸಂಖ್ಯೆ :
080–23564444 / 23464033 / 23464034
ಇ–ಮೇಲ್ : info@ksccsf.org
ksccsfltd@gmail.com, ವೆಬ್ : www.ksccsf.org

**ಸಂಪಾದಕ ಮಂಡಳಿ**

ಅಧ್ಯಕ್ಷರು / ಪ್ರಧಾನ ಸಂಪಾದಕರು :
**ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ**

ಉಪಸಂಪಾದಕರು :
**ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್ ಗೌಡ**

ಸದಸ್ಯರು :
**ಶ್ರೀ ಕೆ. ಕೃಷ್ಣಮೂರ್ತಿ, ಶ್ರೀ ಜಿ. ಮಲ್ಲಿಕಾರ್ಜುನಯ್ಯ**
**ಶ್ರೀ ಹೆಚ್.ಟಿ. ನಾಗೇಶ್, ಶ್ರೀ ಚಿತ್ತರಂಜನ್ ಬೋಳಾರ್**

ಸಂಪಾದಕರು : **ಶ್ರೀಮತಿ ಪಿ. ಆಶಾಲತಾ**
ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರಭಾರ)

# 12 ಲಕ್ಷ ರಾಷ್ಟ್ರ ಧ್ವಜಗಳನ್ನು ಮಾರಾಟ ಮಾಡಲು ಕರ್ನಾಟಕ ಅಂಚೆ ಇಲಾಖೆ ಯೋಜನೆ



**ಬೆಂಗಳೂರು:** ಸ್ವಾತಂತ್ರ್ಯದ ಅಮೃತ ಮಹೋತ್ಸವದ ಆಚರಣೆ–ಯ ಹಿನ್ನೆಲೆಯಲ್ಲಿ ಮನೆ ಮನೆಗೆ ತ್ರಿವರ್ಣ ಧ್ವಜ ಅಭಿಯಾನ ನಡೆಸಲಾಗುತ್ತಿದ್ದು, ಇದರ ಭಾಗವಾಗಿ ರಾಜ್ಯ ಅಂಚೆ ಇಲಾಖೆ 12 ಲಕ್ಷ ರಾಷ್ಟ್ರ ಧ್ವಜಗಳನ್ನು ಮಾರಾಟ ಮಾಡುವ ಯೋಜನೆ ಹೊಂದಿದೆ.

ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ರಾಜೇಂದ್ರ ಕುಮಾರ್ ಪತ್ರಿಕಾ ವರದಿಗಾರರೊಂದಿಗೆ ಮಾತನಾಡಿದ್ದು, "ರಾಜ್ಯದ ಪ್ರತಿ ಪ್ರಧಾನ ಅಂಚೆ ಕಚೇರಿಯ ಎದುರು ಸೆಲ್ಫಿ ಪಾಯಿಂಟ್‌ನ್ನು ಸ್ಥಾಪಿಸಲಾಗುತ್ತದೆ. ರಾಷ್ಟ್ರ ಧ್ವಜದೊಂದಿಗೆ ಸೆಲ್ಫಿ ಕ್ಲಿಕ್ಕಿಸಿಕೊಂಡು ಜನತೆ ಅದನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಳ್ಳಬಹುದಾಗಿದೆ. ಇನ್ನು ದೇಶ ಭಕ್ತಿ ಗೀತೆಯ ಮೂಲಕ ಪ್ರಧಾನ ಅಂಚೆ ಕಚೇರಿಗಳಲ್ಲಿ ಅಭಿಯಾನದ ವಿಡಿಯೋಗಳನ್ನು ಪ್ರಸಾರ ಮಾಡಲಾಗುತ್ತದೆ ಎಂದು ತಿಳಿಸಿದ್ದಾರೆ.

ಕೇಂದ್ರ ಸರ್ಕಾರ ದೇಶಾದ್ಯಂತ 2 ಕೋಟಿ ಧ್ವಜ ಮಾರಾಟ ಮಾಡುವುದನ್ನು ಕಡ್ಡಾಯಗೊಳಿಸಿದೆ. ರಾಜ್ಯದಲ್ಲಿ ಎಲ್ಲಾ ಅಂಚೆ ಕಚೇರಿಗಳ ಮೂಲಕ ಆ.1 ರಿಂದ 12 ಲಕ್ಷ ಧ್ವಜಗಳನ್ನು ಮಾರಾಟ ಮಾಡುವ ಉದ್ದೇಶ ಹೊಂದಲಾಗಿದೆ ಎಂದು ಸಿಪಿಎಂಜಿ ಹೇಳಿದ್ದಾರೆ.

ಸ್ವಾತಂತ್ರ್ಯದ ಅಮೃತ ಮಹೋತ್ಸವದ ಹಿನ್ನೆಲೆಯಲ್ಲಿ ಮೂರು ದಿನಗಳ ಕಾಲ ಧ್ವಜಾರೋಣ ಮಾಡುವುದಕ್ಕಾಗಿ ಜನತೆಗೆ ಉತ್ತೇಜನ ನೀಡಲಾಗುವುದು, ಜನತೆಯಲ್ಲಿ ದೇಶಭಕ್ತಿ ಮೂಡಿಸುವುದು ಹಾಗೂ ಆ ಮೂಲಕ ದೇಶ ಕಟ್ಟಲು ಶ್ರಮಿಸಿದವರ ಕೊಡುಗೆಗಳನ್ನು ನೆನೆಯುವಂತೆ ಮಾಡುವುದು ಈ ಅಭಿಯಾನದ ಹಿಂದಿನ ಉದ್ದೇಶವಾಗಿದೆ ಎಂದು ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ಹೇಳಿದ್ದಾರೆ.

**ಸುಭಾಷಿತ :** ನಿಮ್ಮ ಮನಸ್ಸು ಪರಿಶುದ್ಧವಾಗಿದ್ದರೆ, ನೆಮ್ಮದಿ ನೆರಳಿನಂತೆ ನಿಮ್ಮನ್ನು ಹಿಂಬಾಲಿಸುತ್ತದೆ. – ಗೌತಮ ಬುದ್ಧ

ಸಹಕಾರ ವಾರ್ತಾ ಪತ್ರಿಕೆ ಚಂದಾದಾರರಾಗ ಬಯಸುವವರು ಚಂದಾ ಹಣವನ್ನು "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು" ಇವರ ಹೆಸರಿಗೆ ಚೆಕ್ ಅಥವಾ ಡಿಡಿಯನ್ನು ಬರೆದು ಕಳುಹಿಸಬೇಕಾಗಿ ವಿನಂತಿ. - ಸಿ.ಇ.ಒ.
ಐದು ವರ್ಷಗಳ ಚಂದಾ: ರೂ : 1500/-

**ಸೂಚನೆ :**
ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅನಿಸಿಕೆ, ಅಭಿಪ್ರಾಯಗಳು ಆಯಾ ಬರಹಗಾರರದೇ ಆಗಿರುತ್ತದೆ ವಿನಃ ಪತ್ರಿಕೆ / ಮಹಾಮಂಡಳದ ವಿಚಾರಗಳಾಗಿರುವುದಿಲ್ಲ.
- ಸಂಪಾದಕರು,
ಸಹಕಾರ ವಾರ್ತಾ ಪತ್ರಿಕೆ.



# ದೇಶದ 15ನೇ ರಾಷ್ಟ್ರಪತಿಯಾಗಿ ಶ್ರೀಮತಿ ದ್ರೌಪದಿ ಮುರ್ಮು ಅಧಿಕಾರ ಸ್ವೀಕಾರ

ಪ್ರಥಮ ಪ್ರಜೆ, ಭಾರತದ ನೂತನ ರಾಷ್ಟಪತಿಗಳಾಗಿ ಒಡಿಶಾ ರಾಜ್ಯದ ಆದಿವಾಸಿ ಮಹಿಳೆ ಶ್ರೀಮತಿ ದ್ರೌಪದಿ ಮುರ್ಮು ಅವರು ಅಧಿಕಾರ ಸ್ವೀಕರಿಸಿದ್ದಾರೆ. ಶ್ರೀಮತಿ ದ್ರೌಪದಿ ಮುರ್ಮು ಅವರು ಜುಲೈ–19ರಂದು ನಡೆದ ರಾಷ್ಟಪತಿ ಚುನಾವಣೆಯಲ್ಲಿ ತಮ್ಮ ಪ್ರತಿಸ್ಪರ್ಧಿ ಯಶವಂತ ಸಿನ್ಹಾ ಅವರ ವಿರುದ್ಧ ಜಯ ಸಾಧಿಸಿದರು. ಜುಲೈ–25ರಂದು ರಾಷ್ಟಪತಿಯಾಗಿ ಅಧಿಕಾರ ಸ್ವೀಕರಿಸಿದರು.

ದ್ರೌಪದಿ ಮುರ್ಮು ಅವರು 1958, ಜೂನ್ 20ರಂದು ಬುಡಕಟ್ಟು ಸಮುದಾಯದ ಕುಟುಂಬದಲ್ಲಿ ಜನಿಸಿದವರು. ಇವರ ಪತಿ ಶ್ಯಾಮ್ ಚರಣ್ ಮುರ್ಮು, ದಂಪತಿಗೆ ಇಬ್ಬರು ಪುತ್ರರು. ಹಿರಿಯ ಮಗ ಅಪಘಾತದಲ್ಲಿ ಸಾವನ್ನಪ್ಪಿದ ಬಳಿಕ, ಖಿನ್ನತೆಗೆ ಒಳಗಾಗಿದ್ದ ಅವರು, 2013ರಲ್ಲಿ ತಮ್ಮ 2ನೇ ಮಗನನ್ನೂ ಅಪಘಾತದಲ್ಲಿ ಕಳೆದುಕೊಂಡರು. ಇದರ ಬೆನ್ನಲ್ಲಿಯೇ 2014ರಲ್ಲಿ ಪತಿಯ ಸಾವನ್ನೂ ನೋಡಿದರು. ಮಾನಸಿಕವಾಗಿ ಸಂಪೂರ್ಣ ಕುಸಿದು ಹೋಗಿದ್ದ ದ್ರೌಪದಿ ಮುರ್ಮು ಬಳಿಕ ಸಮಾಜ ಸೇವೆಯಲ್ಲಿಯೇ ತೊಡಗಿಸಿಕೊಂಡಿದ್ದರು.

ಸಂಘರ್ಷದ ಮೂಲಕ ಬದುಕು ಕಟ್ಟಿಕೊಂಡು ಏಕಾಂಗಿಯಾಗಿ ಆಲದಮರದ ರೀತಿ ರಾಜಕೀಯದಲ್ಲಿ ಬೆಳೆದು ನಿಂತ ಮಹಿಳೆ ದ್ರೌಪದಿ ಮುರ್ಮು. ಆದಿವಾಸಿ ಜನರ ನಡುವೆ ಅಸಾಮಾನ್ಯಳಾಗಿ ಬೆಳೆದ ನಾಯಕಿ. ದ್ರೌಪದಿ ಮುರ್ಮುರವರು ರಮಾದೇವಿ ಕಾಲೇಜಿನಲ್ಲಿ ಪದವಿ ಮುಗಿಸಿ 1979ರಿಂದ 1983ರ ವರೆಗೆ ಒಡಿಶಾ ಸರ್ಕಾರದಲ್ಲಿ ನೀರಾವರಿ ಹಾಗೂ ವಿದ್ಯುತ್ ಇಲಾಖೆಯಲ್ಲಿ ಕೆಲಸ ಮಾಡಿದವರು. ಕಾಡಿನಲ್ಲಿ ಬೆಳೆದು ಸಂಘರ್ಷದ ಮೂಲಕ ಬದುಕು ಕಟ್ಟಿಕೊಂಡ ದ್ರೌಪದಿ ಮುರ್ಮು ಇಲ್ಲಿಯ ತನಕ ಬಂದು ಮುಟ್ಟಿದ್ದೆ ಒಂದು ದೊಡ್ಡ ಸಾಧನೆ. ಆದರೆ, ಸಿಕ್ಕ ಕೆಲಸದಿಂದ ತಾನು ನೆಮ್ಮದಿಯಾಗಿ ಬದುಕಬಹುದೇ ಹೊರತು ತನ್ನ ಸಮುದಾಯವಲ್ಲ ಎನ್ನುವ ಸತ್ಯವನ್ನರಿತು ತನ್ನ ಸಮುದಾಯದ ಹೆಣ್ಣು ಮಕ್ಕಳ ಬದುಕು ಕಟ್ಟುವ ಛಲದಿಂದ ವನವಾಸಿಗಳಿಗೆ ನಾಯಕತ್ವ ಕೊಡುವ ಹಠದಿಂದ. ಆಕೆ ಆಯ್ದುಕೊಂಡಿದ್ದು ರಾಜಕೀಯ ಕ್ಷೇತ್ರ.

ಅರಬಿಂದೋ ಇಂಟರ್ಗಲ್ ಎಜುಕೇಷನ್ ಸೆಂಟರ್‌ನಲ್ಲಿ ಸಹಾಯಕ ಪ್ರೊಫೆಸರ್ ಆಗಿ ಕಾರ್ಯನಿರ್ವಹಿಸುತ್ತಿರುವಾಗಲೇ 1997ರ ರಾಯರಂಗ್ ಪುರದಲ್ಲಿ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಗೆದ್ದು ಎನ್.ಡಿ.ಎಯ ಉಪಾಧ್ಯಕ್ಷರಾಗಿ ಆದಿವಾಸಿ ಜಗತ್ತಿನ ನಾಯಕಿಯಾಗಿ ಹೊರ ಹೊಮ್ಮಿದ್ದರು. ಬೂತ್‌ಮಟ್ಟದ ಕಾರ್ಯಕರ್ತೆಯಾಗಿ ತನ್ನ ಸ್ವಂತ ಪರಿಶ್ರಮದಿಂದ ಬೆಳೆದು ಭಾರತೀಯ ಜನತಾ ಪಾರ್ಟಿಯ ರಾಯ್‌ರಂಗ್ ಕ್ಷೇತ್ರದಿಂದ 2000ರಿಂದ ಎರಡು ಬಾರಿ ಹಲವು ಖಾತೆಗಳ ಮಂತ್ರಿಯಾಗಿ, ಒಡಿಶಾ ರಾಜ್ಯದ ಉತ್ತಮ ಶಾಸಕಿಯಾಗಿ ನೀಲಕಂಠ ಪ್ರಶಸ್ತಿ ಪಡೆದ ಹೆಣ್ಣು ಮಗಳು ದ್ರೌಪದಿ ಮುರ್ಮು.

ಜಾರ್ಖಂಡ್ ರಾಜ್ಯದ ಮೊದಲ ಮಹಿಳಾ ಗವರ್ನರ್ ಆಗಿ ಸಾಮಾಜಿಕವಾಗಿ, ರಾಜಕೀಯವಾಗಿ ಅತ್ಯಂತ ಶ್ರೇಷ್ಠತೆಯ ಎತ್ತರಕ್ಕೆ ಏರಿದ್ದಾರೆ. ದ್ರೌಪದಿ ಮುರ್ಮು ಅವರು ರಾಜಕೀಯ ಮತ್ತು ಸಮಾಜ ಸೇವೆಯಲ್ಲಿ ಸುಮಾರು ಎರಡು ದಶಕಗಳನ್ನು ಕಳೆದಿದ್ದಾರೆ.

ಕಟ್ಟ ಕಡೆಯ ವ್ಯಕ್ತಿಯು ದೇಶದ ಸರ್ವ ಶ್ರೇಷ್ಠ ಹುದ್ದೆಯನ್ನು ಅಲಂಕರಿಸಬಹುದು ಎಂದು ಜಗತ್ತಿಗೆ ತೋರಿಸುವ ಮೂಲಕ ಸಾಬೀತು ಪಡಿಸಿ, ವನವಾಸಿ ಹೆಣ್ಣು ಮಗಳೊಬ್ಬಳು ರಾಷ್ಟ್ರಪತಿಯಾಗಿರುವುದರಿಂದ ಸಾರ್ವಜನಿಕರಿಂದ ಅಭಿನಂದನೆ ವ್ಯಕ್ತವಾಗಿದೆ.

ದೇಶದ ಉನ್ನತ ಸಾಂವಿಧಾನಿಕ ಹುದ್ದೆಗೇರಿದ 2ನೇ ಮಹಿಳೆ ಎಂಬ ಖ್ಯಾತಿ ಪಡೆದಿದ್ದಾರೆ. ಸಮಾಜಕ್ಕೆ ಸೇವೆ ಸಲ್ಲಿಸಲು ಮತ್ತು ಬಡವರು ದೀನ ದಲಿತರು ಮತ್ತು ಅಂಚಿನಲ್ಲಿರುವವರ ಸಬಲೀಕರಣಕ್ಕಾಗಿ ತಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದಾರೆ. ದ್ರೌಪದಿ ಮುರ್ಮು ಅವರು ರಾಷ್ಟ್ರಪತಿಯಾಗಿರುವುದಕ್ಕೆ ಸಹಕಾರ ಮಾಸಪತ್ರಿಕೆ ಶುಭ ಹಾರೈಸುತ್ತದೆ.

# ಭಾರತ 75ನೇ ಸ್ವಾತಂತ್ರ್ಯ ದಿನ ಅಮೃತ ಮಹೋತ್ಸವ
# ಪ್ರತಿ ಮನೆ/ಕಚೇರಿ ಮೇಲೆ ರಾಷ್ಟ್ರ ಧ್ವಜ ಹಾರಾಡಲಿ – ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ

**ಬೆಂಗಳೂರು :** 75ನೇ ಭಾರತ ಸ್ವಾಂತಂತ್ರ್ಯೋತ್ಸವದ "ಆಜಾದಿ ಕಾ ಅಮೃತ" ಮಹೋತ್ಸವ ಕಾರ್ಯಕ್ರಮದ ಅಂಗವಾಗಿ "ಹರ್ ಘರ್ ತಿರಂಗಾ" ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ರಾಜ್ಯದಲ್ಲಿ ಒಂದು ಕೋಟಿ ರಾಷ್ಟ್ರ ಧ್ವಜವನ್ನು ಹಾರಿಸಲು ಕ್ರಮ ವಹಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಯಿ ಅವರು ತಿಳಿಸಿದರು.

ಕೇಂದ್ರ ಗೃಹ ಮತ್ತು ಸಹಕಾರ ಸಚಿವರು ಹಾಗೂ ಕೇಂದ್ರ ಸಂಸ್ಕೃತಿ ಸಚಿವರಿಂದ "ಆಜಾದಿ ಕಾ ಅಮೃತ" ಮಹೋತ್ಸವ ಅಂಗವಾಗಿ ಹರ್ ಘರ್ ತಿರಂಗಾ ಕುರಿತ ವಿಡಿಯೋ ಸಂವಾದದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸರ್ಕಾರಿ, ಸರ್ಕಾರೇತರ, ಶಾಲಾ ಕಾಲೇಜುಗಳಲ್ಲಿ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವ ಉದ್ದೇಶದಿಂದ ಮುಖ್ಯ ಕಾರ್ಯದರ್ಶಿ ಅವರ ಅಡಿಯಲ್ಲಿ ಉನ್ನತ ಮಟ್ಟದ ಸಮಿತಿ ರೂಪಿಸಲಾಗಿದ್ದು, ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು, ಕನ್ನಡ ಮತ್ತು ಸಂಸ್ಕೃತಿ ಪೋಲೀಸ್ ಸೇರಿದಂತೆ, ಈಗಾಗಲೇ ಹರ್ ಘರ್ ತಿರಂಗಾ ಕಾರ್ಯಕ್ರಮ ಅನುಷ್ಠಾನಕ್ಕೆ ಸಭೆಗಳು ನಡೆಯುತ್ತಿವೆ ಎಂದರು.

ನಾಲ್ಕು ಭಾಗಗಳನ್ನಾಗಿ ವಿಭಾಗಿಸಲಾಗಿದ್ದು ಶೇ.60ರಷ್ಟು ಗ್ರಾಮೀಣ ಪ್ರದೇಶ ಹಾಗೂ ಶೇ.40ರಷ್ಟು ಬಿಬಿಎಂಪಿ ಸೇರಿದಂತೆ ನಗರ ಪ್ರದೇಶಗಳ ಮನೆಗಳು, ಸರ್ಕಾರಿ ಕಛೇರಿ, ಶಾಲಾ ಕಾಲೇಜುಗಳಲ್ಲಿ ಧ್ವಜ ಹಾರಿಸುವ ಮೂಲಕ ಒಟ್ಟು ಒಂದು ಕೋಟಿ ರಾಷ್ಟ್ರೀಯ ತ್ರಿವರ್ಣ ಧ್ವಜವನ್ನು ಹಾರಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು.

ರಾಷ್ಟ್ರೀಯ ಧ್ವಜ ತಯಾರಿಸಿ ದೇಶಾದ್ಯಂತ ಪೂರೈಸುತ್ತಿರುವ ಧಾರವಾಡದ ಬಳಿಯಿರುವ ರಾಷ್ಟ್ರಧ್ವಜ ಉತ್ಪಾದಕ ಸಂಸ್ಥೆ. ಸ್ವಸಹಾಯ ಸಂಘಗಳ ಮೂಲಕ 50 ಲಕ್ಷದಷ್ಟು ಧ್ವಜಗಳನ್ನು ಉತ್ಪಾದಿಸಲಿದ್ದೇವೆ.



ಸ್ವಸಹಾಯ ಸಂಘಗಳ ಮೂಲಕ 50 ಲಕ್ಷದಷ್ಟು ಧ್ವಜಗಳನ್ನು ಉತ್ಪಾದಿಸಲಿದ್ದೇವೆ. 5 ಲಕ್ಷ ತ್ರಿವರ್ಣ ಧ್ವಜಗಳನ್ನು ಪೂರೈಸಲು ಕೇಂದ್ರ ಸರ್ಕಾರಕ್ಕೆ ಈಗಾಗಲೇ ಇಂಡೆಂಟ್ ನೀಡಲಾಗಿದ್ದು, ಉಳಿದ 45 ಲಕ್ಷ ತ್ರಿವರ್ಣ ಧ್ವಜಗಳನ್ನು ಪೂರೈಸಲು ಕೇಂದ್ರ ಸರ್ಕಾರಕ್ಕೆ ಇಂಡೆಂಟ್ ನೀಡಲಾಗುವುದು ಎಂದರು.

ಕೇಂದ್ರ ಗೃಹ ಸಚಿವ ಅಮಿತ್ ಶಾ ಮಾತನಾಡಿ, ಹರ್ ಘರ್ ತಿರಂಗಾ ಕಾರ್ಯಕ್ರಮದ ಕುರಿತು ಎಲ್ಲಾ ಹಂತದಲ್ಲೂ ಅಗತ್ಯ ಮತ್ತು ವ್ಯಾಪಕ ಪ್ರಚಾರ ನೀಡುವಂತೆ ತಿಳಿಸಿದರಲ್ಲದೆ, ಆಗಸ್ಟ್ 13ರಿಂದ 15ರವರೆಗೆ ಮೂರು ದಿನಗಳ ಕಾಲ ದೇಶಾದ್ಯಂತ 20 ಕೋಟಿ ರಾಷ್ಟ್ರ ಧ್ವಜಗಳನ್ನು ಹಾರಿಸಲು ಕ್ರಮವಹಿಸಬೇಕು ಎಂದರು.

ಆಗಸ್ಟ್–13ರಿಂದ 15ರವರೆಗೆ ಮೂರು ದಿನಗಳ ಅವಧಿಯಲ್ಲಿ ಜನತೆಯು ಹಾರಿಸುವ ರಾಷ್ಟ್ರ ಧ್ವಜದೊಂದಿಗೆ ಸೆಲ್ಪಿ ಭಾವಚಿತ್ರವೊಂದನ್ನು ತೆಗೆದು, ಕೇಂದ್ರ ಸರ್ಕಾರದ ಜಾಲತಾಣದಲ್ಲಿ ಅಪ್‌ಲೋಡ್ ಮಾಡಬಹುದಾಗಿದೆ ಎಂದು ತಿಳಿಸಿದರು.



ಆತ್ಮಶಕ್ತಿ ವಿವಿಧೋದ್ದೇಶ ಸಹಕಾರ ಸಂಘ ನಿ., ಮಂಗಳೂರು ಇದರ ಅಧ್ಯಕ್ಷರು ಹಾಗೂ ಪತ್ತಿನ ಮಹಾಮಂಡಳದ ನಿರ್ದೇಶಕರು ಆದ ಶ್ರೀ ಚಿತ್ತರಂಜನ್ ಬೋಳಾರ್‌ರವರು ಪತ್ತಿನ ಮಹಾಮಂಡಳದ ಉಪಾಧ್ಯಕ್ಷರಾದ ಶ್ರೀ ಕೆ.ಕೆ. ಮಹೇಂದ್ರಪ್ರಸಾದ್ ಗೌಡರವರಿಗೆ ಕಟ್ಟಡ ನಿರ್ಮಾಣದ ದೇಣಿಗೆ ಚೆಕ್ಕನ್ನು ನೀಡಿದರು. ಸಂಘದ ಆಡಳಿತಮಂಡಳಿ ಸದಸ್ಯರು, ಕಾರ್ಯದರ್ಶಿ ಹಾಗೂ ಪತ್ತಿನ ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರ) ಶ್ರೀಮತಿ ಆಶಾಲತಾ.ಪಿ.ರವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.



# ಸಹಕಾರ ವಿಷಯದಲ್ಲಿ ಡಿಪ್ಲೊಮಾ ಪಡೆದವರಿಗೆ ಉದ್ಯೋಗದಲ್ಲಿ ಮೀಸಲಾತಿ – ಕಾನೂನಿಗೆ ತಿದ್ದುಪಡಿ

## ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಘೋಷಣೆ

**ಬೆಂಗಳೂರು :** ಸಹಕಾರ ವ್ಯವಸ್ಥೆಯತ್ತ ಯುವಜನರು ಧಾವಿಸಿ ಬರಬೇಕು, ಚಳವಳಿಯನ್ನು ಆರೋಗ್ಯಕರವಾಗಿ ಬೆಳೆಸಬೇಕು ಎಂಬ ಆಶಯದೊಂದಿಗೆ ಸಹಕಾರ ವಿಷಯದಲ್ಲಿ ಅಧ್ಯಯನ ಮಾಡಿ ಡಿಪ್ಲೊಮಾ ಹೊಂದಿದವರಿಗೆ ಉದ್ಯೋಗದಲ್ಲಿ ಮೀಸಲಾತಿ ಕಲ್ಪಿಸುವ ಉದ್ದೇಶವಿದ್ದು, ಅದಕ್ಕೆ ಅನುಗುಣವಾಗಿ ಸಹಕಾರ ಕಾನೂನಿಗೆ ತಿದ್ದುಪಡಿ ತರಲಾಗುವುದು ಎಂದು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಘೋಷಿಸಿದರು. ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ವ್ಯವಸ್ಥೆ ಮಾಡಿದ್ದ 100ನೇ ಅಂತಾರಾಷ್ಟ್ರೀಯ ಸಹಕಾರ ದಿನಾಚರಣೆಯನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಸಹಕಾರ ಸಂಸ್ಥೆಗಳು ಆರೋಗ್ಯಕರವಾಗಿ ಬೆಳೆಯಲು ಸಹಕಾರ ಕ್ಷೇತ್ರದ ಬಗ್ಗೆ ಪ್ರಬುದ್ಧತೆಯನ್ನು ಗಳಿಸಿಕೊಂಡು ವೃತ್ತಿಪರವಾಗಿ ಕೆಲಸ ಮಾಡುವ ಯುವಜನರ ಅಗತ್ಯವಿದೆ. ದೂರದೃಷ್ಟಿಯಿಂದ ಸಹಕಾರ ವ್ಯವಸ್ಥೆಯನ್ನು ಬೆಳೆಸುವವರು ಸಹಕಾರ ಚಳವಳಿಗೆ ಧಾವಿಸಿಬರಬೇಕಾಗಿದೆ. ಅದರ ಹಿನ್ನೆಲೆಯಲ್ಲಿ ಯುವಜನರ ಮಹತ್ವಾಕಾಂಕ್ಷೆಯಾಗಿರುವ ಉದ್ಯೋಗವನ್ನು ಅವರಿಗೆ ನೀಡಲು ಅನುಕೂಲ ಮಾಡಿಕೊಡಬೇಕಾಗುತ್ತದೆ. ಈ ಗುರಿ ಮುಟ್ಟಲು ಸಹಕಾರ ವಿಷಯದಲ್ಲಿ ಡಿಪ್ಲೊಮಾ ಮಾಡಿರುವವರಿಗೆ ಉದ್ಯೋಗದಲ್ಲಿ ಮೀಸಲಾತಿ ಸೃಷ್ಟಿಸಲು ಕಾನೂನಿಗೆ ಅಗತ್ಯ ತಿದ್ದುಪಡಿ ತರಲು ಉದ್ದೇಶಿಸಲಾಗಿದೆ ಎಂದು ಸಚಿವರು ವಿವರಿಸಿದರು.

ಸಹಕಾರಾಭಿವೃದ್ಧಿಗೆ ಸಹಕಾರ ಶಿಕ್ಷಣ–ತರಬೇತಿ–ಪ್ರಚಾರ ಅಗತ್ಯವಾಗಿದ್ದು, ಸಹಕಾರ ಮಹಾಮಂಡಳದ ಹಿರಿಯ ಸಹಕಾರಿ ಮುಖಂಡರಾದ ಜಿ.ಟಿ. ದೇವೇಗೌಡರ ಮಾರ್ಗದರ್ಶನದಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿದೆ. ಸಹಕಾರ ಮಹಾಮಂಡಳವನ್ನು ಮತ್ತಷ್ಟು ಬಲಪಡಿಸುವ ಪ್ರಯತ್ನವನ್ನು ಮಾಡೋಣ ಎಂದವರು ಹೇಳಿದರು.

**ಯಶಸ್ವಿನಿ ಯೋಜನೆ :** ಹಿಂದಿನ ಯಶಸ್ವಿನಿ ರೈತ ಆರೋಗ್ಯ ಯೋಜನೆ, ಪಟ್ಟಣ ಪ್ರದೇಶದ ಸಹಕಾರಿ ಸದಸ್ಯರುಗಳಿಗೂ ವಿಸ್ತರಣೆಯಾಗಿತ್ತು. ಕಾರಣಾಂತರಗಳಿಂದ ನಿಂತುಹೋಗಿದೆ. ರೈತರ, ಸಹಕಾರಿಗಳ ಒತ್ತಾಯದ ಮೇಲೆ ಯಶಸ್ವಿನಿ ಆರೋಗ್ಯ ಯೋಜನೆಯನ್ನು ಪುನರಾರಂಭಿಸಲು ಸರ್ಕಾರ ನಿರ್ಧರಿಸಿದ್ದು, ಯೋಜನೆಯನ್ನು ಅಕ್ಟೋಬರ್ 2 ರಿಂದ ಜಾರಿಗೊಳಿಸಲು ಸಿದ್ಧತೆ ನಡೆದಿದೆ. ಯೋಜನೆಯಿಂದ ಲಕ್ಷಾಂತರ ಜನರಿಗೆ ಅನುಕೂಲವಾಗಲಿದೆ ಎಂದು ಸಚಿವ ಸೋಮಶೇಖರ್ ತಿಳಿಸಿದರು.

**ಕ್ಷೀರ ಸಮೃದ್ಧಿ ಸಹಕಾರ ಬ್ಯಾಂಕ್ :** ಹೈನುಗಾರರ ಅನುಕೂಲಕ್ಕಾಗಿ ಸರ್ಕಾರ ಇತ್ತೀಚೆಗೆ ಘೋಷಿಸಿದ ಕ್ಷೀರ ಸಮೃದ್ಧಿ ಸಹಕಾರ ಬ್ಯಾಂಕ್ ಆರಂಭಕ್ಕೆ ರಿಜರ್ವ್ ಬ್ಯಾಂಕಿನ ಅನುಮತಿಯನ್ನು ಕೋರಲಾಗಿದ್ದು, ಅನುಮತಿ ದೊರೆಯುವ ಆಶಾಭಾವನೆಯನ್ನು ಇರಿಸಿಕೊಳ್ಳಲಾಗಿದೆ. ಅದರಿಂದ 25 ಲಕ್ಷ ಹಾಲು ಉತ್ಪಾದಕರಿಗೆ ಅನುಕೂಲವಾಗಲಿದೆ ಎಂದರು.

**ಪ್ಯಾಕ್ಸ್ ಕಂಪ್ಯೂಟರೀಕರಣ :** ರಾಜ್ಯದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಆಡಳಿತವನ್ನು ಗಣಕೀಕರಣಗೊಳಿಸಬೇಕಾದ ಅಗತ್ಯವಿದ್ದು, ಅದಕ್ಕಾಗಿ ಈಗಾಗಲೇ ಕೇಂದ್ರ ಸರ್ಕಾರ ನೆರವಿನ ಘೋಷಣೆ ಮಾಡಿದೆ. ಶೀಘ್ರವೇ ಪ್ಯಾಕ್ಸ್‌ಗಳ ಸಂಪೂರ್ಣ ಗಣಕೀಕರಣ ಪ್ರಕ್ರಿಯೆ ಆರಂಭವಾಗಲಿದೆ ಎಂದು ಸಚಿವರು ತಿಳಿಸಿದರು. 100ನೇ ಅಂತಾರಾಷ್ಟ್ರೀಯ ಸಹಕಾರ ದಿನಾಚರಣೆ ಅಂಗವಾಗಿ ಮೈಸೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಯಶವಂತ ಡೋಂಗ್ರೆ ಅವರು ದಿನಾಚರಣೆಯ ಧ್ಯೇಯವಾದ "ಸಹಕಾರ ಸಂಸ್ಥೆಗಳು ಉತ್ತಮ ವಿಶ್ವವನ್ನು ನಿರ್ಮಿಸಬಲ್ಲವು" ಎಂಬ ವಿಷಯ ಕುರಿತು ಉಪನ್ಯಾಸ ಮಾಡಿದರು.

ಶಾಸಕರು, ಮಾಜಿ ಸಚಿವರು, ಸಹಕಾರ ಮಹಾಮಂಡಳದ ಅಧ್ಯಕ್ಷರೂ ಆದ ಜಿ.ಟಿ. ದೇವೇಗೌಡರು ತಮ್ಮ ಅಧ್ಯಕ್ಷ ಭಾಷಣದಲ್ಲಿ ರಾಷ್ಟ್ರದ, ರಾಜ್ಯದ ಸಹಕಾರ ಚಳವಳಿಯನ್ನು ಬಲಪಡಿಸುವ ಜವಾಬ್ದಾರಿ ಎಲ್ಲರ ಮೇಲಿದೆ. ಸಹಕಾರ ಮಹಾಮಂಡಳ ವೈವಿಧ್ಯಪೂರ್ಣ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸಹಕಾರ ಶಿಕ್ಷಣ–ತರಬೇತಿ–ಪ್ರಚಾರವನ್ನು ಪರಿಣಾಮಕಾರಿಯಾಗಿ ನೀಡಲು ಪ್ರಯತ್ನಿಸುತ್ತಿದೆ. ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸಹಕಾರ ಸಂದೇಶವನ್ನು ಮುಟ್ಟಿಸಲು ಪ್ರಯತ್ನಿಸುತ್ತಿದೆ ಎಂದು ಹೇಳಿದರು.

## ಮಂಗಳೂರಿನಲ್ಲಿ ಸಹಕಾರ ತರಬೇತಿ ಕಾರ್ಯಕ್ರಮ

# ಸಹಕಾರ ಸಂಘಗಳ ಬಲವರ್ಧನೆಗೆ ತರಬೇತಿ ಪೂರಕ – ಶ್ರೀ ಕೆ.ಕೆ. ಮಹೇಂದ್ರಪ್ರಸಾದ್ ಗೌಡ




**ಮಂಗಳೂರು:** ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ (ನಿ.) ಬೆಂಗಳೂರು ಇವರಿಂದ ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘ (ನಿ.) ಮಂಗಳೂರು ಇವರ ಸಹಯೋಗದೊಂದಿಗೆ ನಗರದ ಪಡೀಲ್‌ನ "ಆತ್ಮಶಕ್ತಿ ಸೌಧ"ದಲ್ಲಿ ಜರುಗಿದ ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರ, ಚಿಕ್ಕಮಗಳೂರು, ಉಡುಪಿ, ಕೊಡಗು, ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿಗೊಳಪಡುವ ಪತ್ತಿನ ಸಹಕಾರ ಸಂಘಗಳ ಆಡಳಿತ ಮಂಡಳಿ ನಿರ್ದೇಶಕರು, ಮುಖ್ಯಕಾರ್ಯನಿರ್ವಹಣಾಧಿಕಾರಿ ಹಾಗೂ ಸಿಬ್ಬಂದಿಗಳಿಗೆ ತರಬೇತಿ ಕಾರ್ಯಾಗಾರದ ಉದ್ಘಾಟನೆಯನ್ನು ಜಂಟಿ ನಿಬಂಧಕರಾದ ಶ್ರೀ ಪ್ರಕಾಶ್ ರಾವ್‌ರವರು ನೇರವೇರಿಸಿದರು.

ನಂತರ ಮಾತನಾಡಿದ ಅವರು, ಪತ್ತಿನ ಮಹಾಮಂಡಳವು ವಿಶಿಷ್ಟವಾಗಿ, ಶಿಸ್ತುಬದ್ಧವಾಗಿ ಪತ್ತಿನ ಸಹಕಾರ ಸಂಘಗಳ ಆಡಳಿತ ಮಂಡಳಿ ನಿರ್ದೇಶಕರು, ಮುಖ್ಯಕಾರ್ಯನಿರ್ವಹಣಾಧಿಕಾರಿ ಹಾಗೂ ಸಿಬ್ಬಂದಿಗಳಿಗೆ ತರಬೇತಿ ಕಾರ್ಯಾಗಾರವನ್ನು ಯಶಸ್ವಿಯಾಗಿ ಆಯೋಜಿಸಿದೆ ಎಂದು ಹೇಳಿದರು. ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘದ ದಶಮಾನೋತ್ಸವ ಕಾರ್ಯಕ್ರಮಕ್ಕೆ ಶುಭ ಕೋರಿದರು.

ಈ ತರಬೇತಿ ಕಾರ್ಯಾಗಾರದ ಅಧ್ಯಕ್ಷತೆಯನ್ನು ವಹಿಸಿದ್ದ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ (ನಿ.) ಬೆಂಗಳೂರು ಇದರ ಉಪಾಧ್ಯಕ್ಷರಾದ ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್ ಗೌಡರವರು ಮಾತನಾಡಿ ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಪ್ರತಿ ವರ್ಷ ತರಬೇತಿ ಕಾರ್ಯಾಗಾರಗಳನ್ನು ಪರಿಣಾಮಕಾರಿಯಾಗಿ ಆಯೋಜಿಸುತ್ತಾ ಬರುತ್ತಿದೆ ಎಂದರು.

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ನಾಲ್ಕು ಅಂತಸ್ತಿನ ಕಟ್ಟಡ ನಿರ್ಮಾಣ ಕಾಮಗಾರಿಯು ಪ್ರಗತಿಯಲ್ಲಿದೆ ಇದು ನಮಗೆಲ್ಲ ಹೆಮ್ಮೆಯ ವಿಚಾರ ಎಂದರು.

ಮುಖ್ಯ ಅತಿಥಿಗಳಾಗಿ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯ ಉಪ ನಿರ್ದೇಶಕರಾದ ಶ್ರೀ ಬಾಲಸುಬ್ರಹ್ಮಣ್ಯ ಕೆ.ಎಸ್., ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ನಿರ್ದೇಶಕರುಗಳಾದ ಶ್ರೀ ಚಿತ್ತರಂಜನ್ ಬೋಳಾರ್ ಹಾಗೂ ಶ್ರೀ ನಾಗೇಶ್ ಎಚ್.ಟಿ., ವಿಶ್ವಕರ್ಮ ಸಹಕಾರ ಬ್ಯಾಂಕಿನ ಅಧ್ಯಕ್ಷರಾದ ಡಾ. ಎಸ್. ಆರ್. ಹರೀಶ್ ಆಚಾರ್, ಸಹಕಾರ ಇಲಾಖೆ ನಿವೃತ್ತ ಅಧಿಕಾರಿ ಶ್ರೀ ಚಂದ್ರಶೇಖರ್ ಸುವರ್ಣ, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಭಾರ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಆಶಾಲತಾ ಹಾಗೂ ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಸೌಮ್ಯ ವಿಜಯ್‌ರವರು ಭಾಗವಹಿಸಿದ್ದರು.

ಈ ತರಬೇತಿ ಕಾರ್ಯಾಗಾರದಲ್ಲಿ ಶ್ರೀ ಬಾಲಸುಬ್ರಹ್ಮಣ್ಯ ಕೆ.ಎಸ್. ಇವರು ಸಹಕಾರ ಸಂಘಗಳಲ್ಲಿ ಲೆಕ್ಕ ಪತ್ರಗಳ ನಿರ್ವಹಣೆ, ಲೆಕ್ಕ ಪರಿಶೋಧನಾ ವರದಿಯ ಪೂರ್ವಸಿದ್ದತೆಯ ಕುರಿತು ಮತ್ತು ದಾವಾ ಬಗ್ಗೆ ವಿವರವಾದ ಉಪನ್ಯಾಸ ನೀಡಿದರು. ಮಂಗಳೂರಿನ ಖ್ಯಾತ ನ್ಯಾಯವಾದಿ ಶ್ರೀ ಸತೀಶ್ ಕುಮಾರ್ ಭಟ್ ಇವರು ಅಡಮಾನ ಸಾಲದ ದಾಖಲೆಗಳ ಬಗ್ಗೆ ಉಪನ್ಯಾಸ ನೀಡಿದರು. ಸೈಬರ್ ಕಾನೂನು



ಸುರಕ್ಷ ಪರಿಣಿತರಾದ ಡಾ. ಅನಂತ ಪ್ರಭು ಜಿ. ಇವರು ಸಹಕಾರ ಸಂಘಗಳಲ್ಲಿ ಸ್ವಸ್ತ ತಂತ್ರಜ್ಞಾನ ಬಳಕೆ ಬಗ್ಗೆ ಉಪನ್ಯಾಸವನ್ನು ಹಾಗೂ ಆಟೋಮೇಷನ್ ಕ್ಲೌಡ್ ಸಲ್ಯೂಶನ್ ಪ್ರೈ.ಲಿ. ಇದರ ಆಡಳಿತ ನಿರ್ದೇಶಕರಾದ ಶ್ರೀ ಜಗದೀಶ ರಾಮ ರವರು ಸಹಕಾರ ಸಂಘಗಳ ಆದಾಯ ಹೆಚ್ಚಿಸುವಲ್ಲಿ ತಂತ್ರಜ್ಞಾನದ ಪಾತ್ರ ಕುರಿತು ಉಪನ್ಯಾಸವನ್ನು ನೀಡಿದರು.

ಸುಮಾರು 250ಕ್ಕೂ ಹೆಚ್ಚಿನ ಪತ್ತಿನ ಸಹಕಾರ ಸಂಘಗಳ ಆಡಳಿತ ಮಂಡಳಿ ನಿರ್ದೇಶಕರು, ಮುಖ್ಯಕಾರ್ಯನಿರ್ವಹಣಾಧಿಕಾರಿ ಹಾಗೂ ಸಿಬ್ಬಂದಿಗಳು ಈ ತರಬೇತಿ ಕಾರ್ಯಾಗಾರದ ಪ್ರಯೋಜನವನ್ನು ಪಡೆದುಕೊಂಡರು.

## ಆಗಸ್ಟ್ ಮೊದಲ ವಾರ ರೆಪೊ ದರ ಮತ್ತೆ ಶೇ.೦.೩೫ ಏರಿಕೆ ಸಂಭವ




**ಹೊಸದಿಲ್ಲಿ :** ಮುಂದಿನ ವಾರ ನಡೆಯಲಿರುವ ರಿಸರ್ವ್ ಬ್ಯಾಂಕ್ ಹಣಕಾಸು ನೀತಿ ಪರಾಮರ್ಶೆ ಸಭೆಯಲ್ಲಿ ಮತ್ತೊಮ್ಮೆ ರೆಪೊ ದರವನ್ನು ಶೇ.0.35ರಷ್ಟು ಹೆಚ್ಚಿಸುವ ಸಾಧ್ಯತೆ ಇದೆ. ಇದರಿಂದಾಗಿ ಗೃಹ, ವಾಹನ ಮತ್ತು ವೈಯಕ್ತಿಕ ಸಾಲಗಳ ಮೇಲಿನ ಬಡ್ಡಿ ದರ ಮತ್ತಷ್ಟು ತುಟ್ಟಿಯಾಗಲಿದೆ. ಗ್ರಾಹಕರ ಇಎಂಐ ಭಾರ ಇನ್ನಷ್ಟು ಹೆಚ್ಚಳವಾಗಲಿದೆ.

ಹಣದುಬ್ಬರವನ್ನು ನಿಗ್ರಹಿಸುವ ನಿಟ್ಟಿನಲ್ಲಿ ಆರ್‌ಬಿಐ ಕಳೆದ ಎರಡು ಸಭೆಗಳಲ್ಲೂ ಬಡ್ಡಿ ದರವನ್ನು(ರೆಪೊ) ಏರಿಕೆ ಮಾಡಿತ್ತು. ಕಳೆದೆರಡು ಸಲದಿಂದ ಒಟ್ಟು ಶೇ.0.90ರಷ್ಟು ರೆಪೊ ದರ ಹೆಚ್ಚಳವಾಗಿದೆ. ಆ.3ರಿಂದ 5 ರವರೆಗೆ ನಡೆಯಲಿರುವ ಸಭೆಯಲ್ಲಿ ಬಡ್ಡಿದರವನ್ನು ಆರ್‌ಬಿಐ ಮತ್ತೆ ಶೇ.0.35ರಷ್ಟು ಹೆಚ್ಚಿಸುವ ಸಾಧ್ಯತೆ ಇದೆ ಎಂದು ಅಮೆರಿಕನ್ ಬ್ರೋಕರೇಜ್ ಸಂಸ್ಥೆ ಬೋಫಾ ಸೆಕ್ಯುರಿಟೀಸ್ ಅಂದಾಜು ಮಾಡಿದೆ. ಆಗಸ್ಟ್‌ನಲ್ಲಿ ಶೇ.0.35ರಷ್ಟು ಹೆಚ್ಚಾದರೆ ರೆಪೋ ದರ ಶೇ.5.25ಕ್ಕೆ ಹೆಚ್ಚಲಿದೆ. ಇದು ಕೊರೊನಾ ಸೋಂಕಿನ ಹಿಂದಿನ ಮಟ್ಟಕ್ಕಿಂತಲೂ ಹೆಚ್ಚಾಗಿದೆ.

ಇತ್ತೀಚಿನ ರೆಪೊ ದರ ಏರಿಕೆಯಿಂದ ಬ್ಯಾಂಕ್‌ಗಳಲ್ಲಿ ಬಡ್ಡಿ ದರಗಳು ಶೇ.0.50ರಿಂದ 1ರ ತನಕ ಏರಿಕೆಯಾಗಿವೆ. ಆಗಸ್ಟ್‌ನಲ್ಲಿ ಶೇ.0.35ರಷ್ಟು ಏರಿಕೆಯಾದರೆ, ಬ್ಯಾಂಕ್‌ನ ಬಡ್ಡಿ ದರಗಳಲ್ಲಿ ಕನಿಷ್ಠ ಶೇ.0.25ರಷ್ಟು ಹೆಚ್ಚಳವಾಗುವ ಸಾಧ್ಯತೆ ಇದೆ.

**ರೆಪೋ ರೇಟ್ ಹೆಚ್ಚಳದ ಪರಿಣಾಮಗಳು:** ಆರ್‌ಬಿಐ ರೆಪೊ ದರ ಹೆಚ್ಚಳದಿಂದ ಹೋಮ್ ಲೋನ್ ಮತ್ತು ಕಾರ್ ಲೋನ್‌ನಂತಹ ಸಾಲಗಳ ಕಂತು ಹೆಚ್ಚಲಿದೆ. ಏಕೆಂದರೆ ಬ್ಯಾಂಕುಗಳು ಹೆಚ್ಚಿದ ರೆಪೋ ದರದ ಹೊರೆಯನ್ನು ತಾವೇ ಭರಿಸುವ ಬದಲು ಗ್ರಾಹಕರಿಗೆ ವರ್ಗಾಯಿಸುತ್ತವೆ.

ರೆಪೋ ದರ ಹೆಚ್ಚಳ ನಿಮ್ಮ ಉಳಿತಾಯ ಬ್ಯಾಂಕ್ ಖಾತೆ ಮತ್ತು ನಿಶ್ಚಿತ ಠೇವಣಿ ಮೇಲೂ ಪರಿಣಾಮ ಬೀರುತ್ತದೆ. ಬ್ಯಾಂಕ್‌ಗಳು ಉಳಿತಾಯ ಖಾತೆ ಮತ್ತು ನಿಶ್ಚಿತ ಠೇವಣಿಗಳ ಮೇಲಿನ ಬಡ್ಡಿ ದರವನ್ನು ಹೆಚ್ಚಿಸಲಿವೆ.

ನಿರಂತರವಾಗಿ ಹೆಚ್ಚುತ್ತಿರುವ ಹಣದುಬ್ಬರವನ್ನು ನಿಯಂತ್ರಿಸುವ ಸಲುವಾಗಿ ಕೇಂದ್ರ ಬ್ಯಾಂಕ್ ರೆಪೊ ದರವನ್ನು ಹೆಚ್ಚಿಸಿದೆ. ರೆಪೊ ದರ ಹೆಚ್ಚಳದಿಂದ ಹಣದುಬ್ಬರವನ್ನು ನಿಯಂತ್ರಣದಲ್ಲಿಡಲು ಸಹಾಯ ಮಾಡುತ್ತದೆ ಎಂದು ನಿರೀಕ್ಷಿಸಬಹುದು.

ನಿಮಗೆ ಕಂತಿನ ಹೊರೆ ಹೆಚ್ಚಾದರೆ, ನಿಮ್ಮ ಸಾಲವನ್ನು ಮರುರಚನೆ ಮಾಡುವ ಮೂಲಕ ಪ್ರಸ್ತುತ ಪಾವತಿಸುತ್ತಿರುವಷ್ಟು ಮೊತ್ತದ ಕಂತನ್ನೇ ಅನ್ನೇ ಇಟ್ಟುಕೊಳ್ಳಬಹುದು. ಹೇಗೆಂದರೆ, ನಿಮ್ಮ ಸಾಲದ ಅವಧಿಯನ್ನು ವಿಸ್ತರಿಸಬಹುದು. ಅಂದರೆ, ನೀವು ಈ ಹಿಂದೆ 160 ತಿಂಗಳ ಅವಧಿಗೆ ತೆಗೆದುಕೊಂಡ ಸಾಲವನ್ನು 162 ಅಥವಾ 165 ತಿಂಗಳಿಗೆ ವಿಸ್ತರಿಸಬಹುದು.

## ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳ ಸಮ್ಮೇಳನ

# ಕೃಷಿ ಕ್ಷೇತ್ರದ ಬಲವರ್ಧನೆಗೆ ದೀರ್ಘಾವಧಿ ಸಾಲಗಳ ವಿಸ್ತರಣೆ ಅಗತ್ಯ : ಕೇಂದ್ರ ಸಹಕಾರ ಸಚಿವ ಅಮಿತ್ ಷಾ




**ನವದೆಹಲಿ :** ಸಹಕಾರ ಮನೋಭಾವದಿಂದ ದೇಶದ ಅಭಿವೃದ್ಧಿಗೆ ನೂತನ ಆಯಾಮ ನೀಡಲು ಸಾಧ್ಯ. ಕೃಷಿ ವಿಕಸನಕ್ಕೆ ಸಹಕಾರ ಕ್ಷೇತ್ರ ಮಹತ್ವದ್ದಾಗಿದ್ದು, ಕೃಷಿ ಅಭಿವೃದ್ಧಿಯಲ್ಲಿ ಸಹಕಾರಿ ಮನೋಭಾವ ಅತ್ಯಗತ್ಯವಾಗಿದೆ. ದೇಶ ಈ ವರ್ಷ ಸ್ವಾತಂತ್ರ್ಯದ ಅಮೃತ ಮಹೋತ್ಸವ ಆಚರಿಸುತ್ತಿರುವ ಸಂದರ್ಭದಲ್ಲಿ ಸಹಕಾರ ಕ್ಷೇತ್ರದ ಉನ್ನತಿಗೆ ಎಲ್ಲರೂ ಶ್ರಮಿಸಬೇಕಾಗಿದೆ ಎಂದು ಕೇಂದ್ರ ಗೃಹ ಹಾಗೂ ಸಹಕಾರ ಸಚಿವರಾದ ಅಮಿತ್ ಷಾ ತಿಳಿಸಿದರು. ದೆಹಲಿಯ ಎನ್‌ಸಿಯುಐ ಆಡಿಟೋರಿಯಂನಲ್ಲಿ ಜುಲೈ 16 ರಂದು ಏರ್ಪಡಿಸಿದ್ದ ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳ ರಾಷ್ಟ್ರೀಯ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಿದ ಅವರು, ದೇಶದಲ್ಲಿ ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳ ಸ್ಥಿತಿಗತಿಗಳ ಕುರಿತು ಚರ್ಚಿಸಿದರು.

ರೈತರ ಆದಾಯವನ್ನು ದ್ವಿಗುಣಗೊಳಿಸಲು ಹಾಗೂ ಆಡಳಿತದಲ್ಲಿ ಸುಧಾರಣೆ ತರುವುದು ಸೇರಿದಂತೆ ಹಲವಾರು ಕ್ರಮಗಳನ್ನು ಕೈಗೊಳ್ಳಲಾಗಿದೆ. ಭಾರತವನ್ನು ಐದು ಟ್ರಿಲಿಯನ್ ಡಾಲರ್ ಆರ್ಥಿಕತೆಯನ್ನಾಗಿ ಮಾಡುವಲ್ಲಿ ಪ್ರಧಾನಿಯವರ ಕನಸನ್ನು ನನಸಾಗಿಸಲು ದೇಶಾದ್ಯಂತ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಸಹಕಾರಿ ಬ್ಯಾಂಕುಗಳ ವಿಸ್ತರಣಾ ಅಭಿಯಾನವನ್ನು ಕೈಗೊಳ್ಳುವ ಅಗತ್ಯವಿದೆ ಎಂದರು.

ದೀರ್ಘಾವಧಿಯ ಸಾಲವು ಕೃಷಿ ಕ್ಷೇತ್ರದಲ್ಲಿ ಮೂಲಸೌಕರ್ಯವನ್ನು ಹೆಚ್ಚಿಸುತ್ತದೆ ಮತ್ತು ರೈತರನ್ನು ಸಮೃದ್ಧಗೊಳಿಸುವ ದೂರದೃಷ್ಟಿಯನ್ನು ಹೊಂದಿದೆ. ಈ ನಿಟ್ಟಿನಲ್ಲಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಸಹಕಾರಿ ಬ್ಯಾಂಕುಗಳ ವಿಸ್ತರಣೆಗಾಗಿ ನಬಾರ್ಡ್ ಪ್ರತ್ಯೇಕ ವಿಭಾಗವನ್ನು ಸ್ಥಾಪಿಸಬೇಕು ಎಂದು ಹೇಳಿದರು.

ನಮ್ಮ ದೇಶದಲ್ಲಿ ಮಾನ್ಸೂನ್‌ಗಿಂತ ರೈತರು ತಮ್ಮ ಶ್ರಮದ ಮೇಲೆ ಹೆಚ್ಚು ಅವಲಂಬಿತರಾಗಿದ್ದಾರೆ. ಭಾರತವು ಅಭಿವೃದ್ಧಿ ಹೊಂದಲು ರೈತರಿಗೆ ದೀರ್ಘಾವಧಿಯ ಸಾಲದ ವಿತರಣೆಯನ್ನು ಹೆಚ್ಚಿಸಬೇಕು. ಕಳೆದ 25 ವರ್ಷಗಳಲ್ಲಿ ಮೂಲಸೌಕರ್ಯಗಳನ್ನು ಸೃಷ್ಟಿಸಲು ಬಳಸಲಾಗುವ ದೀರ್ಘಾವಧಿಯ ಸಾಲದ ಪಾಲನ್ನು ಒಟ್ಟು ಸಾಲದ ಹೊರಹರಿವಿನಲ್ಲಿ 50% ರಿಂದ 25% ಕ್ಕೆ ಇಳಿಸಲಾಗಿದೆ ಎಂದು ವಿಷಾಧಿಸಿದ ಸಚಿವರು, ನಬಾರ್ಡ್ ಮತ್ತು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಸಹಕಾರಿ ಬ್ಯಾಂಕುಗಳು ತಮ್ಮ ಉದ್ದೇಶದ ಬಗ್ಗೆ ಹೆಚ್ಚು ಗಮನಹರಿಸಬೇಕು ಎಂದು ಹೇಳಿದರು.

ಕೃಷಿ ಭೂಮಿಯಲ್ಲಿ ಬಾಳಿಕೆ ಬರುವ ಮೂಲಸೌಕರ್ಯಗಳನ್ನು ಹೆಚ್ಚಿಸಲು ರೈತರು ದೀರ್ಘಾವಧಿಯ ಸಾಲಗಳನ್ನು ತೆಗೆದುಕೊಳ್ಳುವ ಸಾಮರ್ಥ್ಯವನ್ನು ರೂಪಿಸುವುದು ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಸಹಕಾರಿ ಬ್ಯಾಂಕುಗಳ ಗುರಿಯಾಗಿದೆ. ದೇಶದಲ್ಲಿ ರಾಜ್ಯ ಕೃಷಿ ಗ್ರಾಮೀಣ ಸಹಕಾರ ಅಭಿವೃದ್ಧಿ ಬ್ಯಾಂಕ್ ಅನ್ನು 13 ರಾಜ್ಯಗಳು ಮಾತ್ರ ಹೊಂದಿವೆ. ಉಳಿದ ರಾಜ್ಯಗಳಲ್ಲಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಸಹಕಾರ ಬ್ಯಾಂಕುಗಳನ್ನು ಪುನರುಜ್ಜೀವನಗೊಳಿಸಲು ಸರ್ಕಾರದೊಂದಿಗೆ ಕೆಲಸ ಮಾಡಲು ನಬಾರ್ಡ್ ಮತ್ತು ರಾಷ್ಟ್ರೀಯ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳ ಮಹಾಮಂಡಳಿಗೆ ಸಲಹೆ ನೀಡಿದ ಅಮಿತ್ ಶಾ, ಈ ವಿಷಯದ ಕುರಿತು ಶೀಘ್ರದಲ್ಲೇ ಸಚಿವಾಲಯದಲ್ಲಿ ಸಭೆ ನಡೆಸಲಾಗುವುದು ಎಂದು ಹೇಳಿದರು.

ಗ್ರಾಮೀಣ ಪ್ರದೇಶಗಳ ಸಮಗ್ರ ಅಭಿವೃದ್ಧಿಗಾಗಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಸಹಕಾರಿ ಬ್ಯಾಂಕುಗಳ, ಪ್ರಾಥಮಿಕ ಕೃಷಿ ಸಂಘಗಳು ಮತ್ತು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳೊಂದಿಗೆ ಸಮನ್ವಯ ಸಾಧಿಸಬೇಕು. ದೇಶದಲ್ಲಿ 8 ಕೋಟಿಗೂ ಹೆಚ್ಚು ಟ್ರಾಕ್ಟರ್‌ಗಳಿವೆ ಆದರೆ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಸಹಕಾರಿ ಬ್ಯಾಂಕುಗಳು ಕೇವಲ 3

12ನೇ ಪುಟಕ್ಕೆ...



# 75ನೇ ಸ್ವಾತಂತ್ರ್ಯದ ಅಮೃತ ಮಹೋತ್ಸವ ಎಷ್ಟೊಂದು ಹರ್ಷ, ಸಂಭ್ರಮಿಸೋಣ ಬನ್ನಿ

ನಮಗೀಗ 75ನೇ ಸ್ವಾತಂತ್ರ್ಯೋತ್ಸವದ ಸಂಭ್ರಮ. ಸಂಪೂರ್ಣವಾಗಿ ಅಳಿಯದ ಜಾತೀಯತೆಯ ಪಿಡುಗು, ಹಿಂಸಾಚಾರ, ಬಡತನ ಇತ್ಯಾದಿ ನ್ಯೂನತೆಗಳ ನಡುವೆಯೂ ನಮ್ಮ ದೇಶ ಕಳೆದ ಏಳುವರೆ ದಶಕಗಳ ಅವಧಿಯಲ್ಲಿ ಮಾಡಿರುವ ಸಾಧನೆ ಅಸಾಧಾರಣ. ಕೆಲವು ಕುಂದುಕೊರತೆಗಳ ಮಧ್ಯೆಯೂ ಭಾರತವೀಗ ವಿಶ್ವದ ಪ್ರಮುಖ ರಾಷ್ಟ್ರಗಳ ಸಾಲಿನಲ್ಲಿ ತಲೆ ಎತ್ತಿ ನಿಂತಿದೆ. ಭಾರತವೀಗ ಪ್ರಗತಿ ಪಥದಲ್ಲಿ ದಾಪುಗಾಲು ಹಾಕುತ್ತಿದೆ. ಸ್ವತಂತ್ರ ಭಾರತದ ಐತಿಹಾಸಿಕ ಸಾಧನೆಯ ಮೈಲುಗಲ್ಲುಗಳು ಇಲ್ಲಿವೆ...

**ಪ್ರಗತಿಯತ್ತ ದಾಪುಗಾಲು:** ಆರ್ಥಿಕ ಹಾಗೂ ಉದ್ಯಮ ವಲಯದಲ್ಲಿ ಸಕಾರಾತ್ಮಕ ಪ್ರಗತಿ ಗುರುತಿಸಬಹುದಾಗಿದೆ. ಏಷ್ಯಾದ ಮೂರನೇ ಅತಿದೊಡ್ಡ ಆರ್ಥಿಕತೆಯಾಗಿರುವ ಭಾರತ, ಜಿಡಿಪಿ ಬೆಳವಣಿಗೆ ದೃಷ್ಟಿಯಿಂದ ವಿಶ್ವದಲ್ಲಿಯೇ ಅತಿ ವೇಗದಲ್ಲಿ ಬೆಳವಣಿಗೆ ಹೊಂದುತ್ತಿರುವ ದೇಶ ಎಂಬ ಹೆಮ್ಮೆಗೆ ಪಾತ್ರವಾಗಿದೆ. ವಿಶ್ವದ ಅತಿ ದೊಡ್ಡ ಆರ್ಥಿಕ ಶಕ್ತಿಯಾಗಿ ಭಾರತ ಬೆಳೆದಿದೆ. ಸ್ವಾತಂತ್ರ್ಯದ ಆರಂಭಿಕ ಹಂತದಲ್ಲಿ ರಚನೆಯಾದ ಕೈಗಾರಿಕಾ ನೀತಿಯಿಂದ ಹಿಡಿದು ಇತ್ತೀಚಿನ ಮೇಕ್‌ಇನ್ ಇಂಡಿಯಾದ ತನಕ ಅನೇಕ ಕೈಗಾರಿಕೆ ನೀತಿಗಳು ದೇಶದ ಉದ್ಯಮ ವಲಯದ ಚಹರೆಯನ್ನೇ ಬದಲಿಸಿವೆ. ಮೊದಮೊದಲು ಕೇಂದ್ರ ಸರಕಾರದ ಅಧೀನದಲ್ಲಿ ಉದ್ಯಮ ವಲಯದ ದಿಗ್ಗಜ ಕಂಪನಿಗಳು ಪ್ರಗತಿಯಾದರೆ, ಉದಾರೀಕರಣದ ನಂತರ ಖಾಸಗಿ ವಲಯದ ಕೈಗಾರಿಕೆಗಳೂ ಗಣನೀಯ ಪ್ರಗತಿ ದಾಖಲಿಸಿತು. ಎಂಬತ್ತರ ದಶಕದ ನಂತರ ಐಟಿ ವಲಯ ನವೋದ್ಯಮದ ತನಕ ಉದ್ಯಮ ಕ್ಷೇತ್ರ ಅನೇಕ ಟಿಸಿಲುಗಳನ್ನು ಒಡೆದಿದೆ.

ಸಾರ್ವಜನಿಕ ವಲಯದ ಕಂಪನಿಗಳು: 1951ರಲ್ಲಿ ಭಾರತದಲ್ಲಿದ್ದ ಕೇಂದ್ರೀಯ ಸಾರ್ವಜನಿಕ ಉದ್ದಿಮೆಗಳು ಕೇವಲ 5. ನಂತರ 1991ರ ವೇಳೆಗೆ 246ಕ್ಕೆ ವೃದ್ಧಿಸಿತ್ತು. ಈಗಲೂ ಡಿಆರ್‌ಡಿಒ, ಎಚ್‌ಎಎಲ್, ಬಿಎಚ್‌ಇಎಲ್, ಬೆಮೆಲ್, ಇಸ್ರೊ, ಕೋಲ್‌ಇಂಡಿಯಾ, ಐಒಸಿ, ಎಚ್ಪಿ, ಒಎನ್ಜಿಸಿ ಇತ್ಯಾದಿ ಸಾರ್ವಜನಿಕ ತೈಲ ಕಂಪನಿಗಳು ಆರ್ಥಿಕತೆಗೆ ಗಣನೀಯ ಕೊಡುಗೆ ಸಲ್ಲಿಸುತ್ತಿವೆ.

**ಮಾಹಿತಿ ತಂತ್ರಜ್ಞಾನದ ಬೆಳವಣಿಗೆ:** ಮಾಹಿತಿ ತಂತ್ರಜ್ಞಾನ ದೇಶದ ಜಿಡಿಪಿಗೆ 1998ರಲ್ಲಿ ಶೇ.1.2ರಷ್ಟು ಕೊಡುಗೆ ನೀಡಿದ್ದರೆ, 2017ರ ವೇಳೆಗೆ ಶೇ.7.7ಕ್ಕೆ ವೃದ್ಧಿಸಿದೆ. ಬೆಂಗಳೂರಿನಲ್ಲಿ ಆರಂಭವಾದ ಐಟಿ ಅಭ್ಯುದಯ ದೇಶದ ಪ್ರಮುಖ ಮಹಾ ನಗರಗಳಲ್ಲಿ ಭಾರಿ ಬೆಳವಣಿಗೆ ಸಾಧಿಸಿದೆ.

**ಮೂಲಸೌಕರ್ಯದಲ್ಲೂ ಮೇಲುಗೈ:** ಯಾವುದೇ ದೇಶ ಅಭಿವೃದ್ಧಿಯಾಗಿದೆ ಎಂದು ಗುರುತಿಸಿಕೊಳ್ಳಬೇಕಿದ್ದರೆ ಅದರ ಮೂಲಸೌಕರ್ಯ ಕ್ಷೇತ್ರ ಅಭಿವೃದ್ಧಿಯಾಗಿರಬೇಕು. ಈ ವಿಷಯದಲ್ಲಿ ಭಾರತ ಕಳೆದ 75 ವರ್ಷದಲ್ಲಿ ಸತತ ಆಶಾದಾಯಕ ಬೆಳವಣಿಗೆ

ಮುಂದಿನ ಪುಟಕ್ಕೆ...



ದಾಖಲಿಸಿದೆ. ಸ್ವಾತಂತ್ರ್ಯ ಸಂದರ್ಭದಲ್ಲಿ ನಮ್ಮ ಸಾರಿಗೆ ಸಂಪರ್ಕ ವ್ಯವಸ್ಥೆ ತುಂಬ ಕಡಿಮೆ ಇತ್ತು. ಆದರೆ, ಇದೀಗ ದಟ್ಟ ಕಾನನದ ಮಧ್ಯೆ ಇರುವ ಹಳ್ಳಿಗೂ ರಸ್ತೆಗಳಾಗಿವೆ, ವಿದ್ಯುತ್ಸಂಪರ್ಕ ದೊರೆತಿದೆ. ಸುವರ್ಣ ಚತುಷ್ಪಥ, ನಾನಾ ಕಾರಿಡಾರ್ಗಳು, ಅತ್ಯಾಧುನಿಕ ರೈಲು ವ್ಯವಸ್ಥೆ, ಅಗ್ಗದ ವಿಮಾನ ಪ್ರಯಾಣ, ವಿದ್ಯುತ್ಸೇವೆ ದೊರೆಯತ್ತಿದೆ. ಇದೆಲ್ಲವೂ ಕೆಲವೇ ದಿನಗಳಲ್ಲಿ ಆಗಿರುವಂಥದ್ದಲ್ಲ, ನಿಧಾನವಾಗಿ ಮತ್ತು ನಿರಂತರವಾದ ಪ್ರಕ್ರಿಯೆ ಇದು.

* 1947ರಲ್ಲಿ ನಾಲ್ಕು ಮಾರ್ಗಗಳ 200 ಕಿ.ಮೀ.ಗೂ ಕಡಿಮೆ ಇದ್ದ ರಾಷ್ಟ್ರೀಯ ಹೆದ್ದಾರಿ ಇದೀಗ 5,472,144 ಕಿ.ಮೀ.ಗೂ ಹೆಚ್ಚಿನ ಪ್ರಮಾಣದಲ್ಲಿದೆ!

* ಭಾರತೀಯ ರೈಲ್ವೆಗೆ ಈಗ 177 ವರ್ಷ. 121407 ಕಿ.ಮೀ ರೈಲುಮಾರ್ಗವಿದೆ. ಈ ಪೈಕಿ ಅರ್ಧದಷ್ಟು ಮಾರ್ಗ ವಿದ್ಯುತೀಕರಣ ಮಾರ್ಗವಿದೆ. 13 ಲಕ್ಷ ಜನರಿಗೆ ಉದ್ಯೋಗ ನೀಡಿದೆ. ಜಗತ್ತಿನ ನಾಲ್ಕನೇ ಅತಿದೊಡ್ಡ ರೈಲು ಜಾಲವಿದೆ.

* ವಿದ್ಯುತ್ ಉತ್ಪಾದನೆಯಲ್ಲಿ ಭಾರತ ಇದೀಗ ಜಗತ್ತಿನ ಮೂರನೇ ಅತಿದೊಡ್ಡ ರಾಷ್ಟ್ರವಾಗಿದೆ. 1,160 ಶತಕೋಟಿ ಯುನಿಟ್ ಉತ್ಪಾದಿಸುತ್ತದೆ. 1947ರಲ್ಲಿ 1132 ಮೆಗಾವ್ಯಾಟ್ವಿದ್ಯುತ್ಉತ್ಪಾದನೆಯಾಗುತ್ತಿತ್ತು.

**ಆಹಾರ ಸ್ವಾವಲಂಬನೆ:** 1947ರಲ್ಲಿ ತನ್ನ 35 ಕೋಟಿ ಜನರಿಗೆ ದಿನದ ಎರಡು ಹೊತ್ತು ಕೂಳು ನೀಡಲು ಒದ್ದಾಡುತ್ತಿದ್ದ ದೇಶ, ಹೊರದೇಶದಿಂದ ಆಹಾರಧಾನ್ಯ ಆಮದು ಮಾಡಿಕೊಳ್ಳುತ್ತಿತ್ತು. 2018ರ ವೇಳೆಗೆ ಆಹಾರ ಭದ್ರತೆಯಲ್ಲಿ ಪರಿಪೂರ್ಣತೆಯನ್ನು ಸಾಧಿಸಿದೆ. ಕೆಲವು ರಾಜ್ಯಗಳಂತೂ ಪ್ರತಿಯೊಬ್ಬರಿಗೂ ಮಾಸಿಕ 7 ಕೆಜಿ ಆಹಾರ ಧಾನ್ಯವನ್ನು ಉಚಿತವಾಗಿ ನೀಡುವಷ್ಟರ ಮಟ್ಟಿಗೆ ಆಹಾರ ಲಭ್ಯತೆ ಕಾಯ್ದುಕೊಂಡಿವೆ. 1960ರಲ್ಲಿ ಡಾ. ಸ್ವಾಮಿನಾಥನ್ ಆರಂಭಿಸಿದ ಹಸಿರು ಕ್ರಾಂತಿ ಹಾಗೂ 1970ರ ದಶಕದಲ್ಲಿ ವರ್ಗೀಸ್ ಕುರಿಯನ್ ಅವರ ಶ್ವೇತ ಕ್ರಾಂತಿಯ ಪರಿಣಾಮ ಧವಸ–ಧಾನ್ಯ, ಹಾಲು–ಮೊಸರು ವಿಷಯದಲ್ಲಿ ಭಾರತ ಗೆದ್ದಿದೆ.

**ಗ್ರಾಮೀಣ ಭಾರತ:** ಸ್ವಾತಂತ್ರ್ಯದ ಬಳಿಕ ಆರಂಭಿಕ ಪಂಚ ವಾರ್ಷಿಕ ಯೋಜನೆಗಳ ಮೂಲಕ ಗ್ರಾಮೀಣ ಅಭಿವೃದ್ಧಿಗೆ ಒತ್ತು ನೀಡಲಾಯಿತು. 1970ರ ದಶಕದಲ್ಲಿ ಹಳ್ಳಿಗಳ ಅಭಿವೃದ್ಧಿಗಾಗಿಯೇ ರೂಪಿಸಿದ

ಜವಾಹರ್ ಲಾಲ್ ರೋಜಗಾರ್ ಯೋಜನೆ, ಕಾರ್ಯಕ್ರಮಗಳ ಮೂಲಕ ದೇಶದ ಒಂದಿಷ್ಟು ಹಳ್ಳಿಗಳು ಬೆಳಕು ಕಂಡವು. ಭೂ ಸುಧಾರಣಾ ಕಾಯಿದೆಗಳು ಜಾರಿಯಾದವು. 1980ರಲ್ಲಿ ಜಾರಿಗೆ ಬಂದ 2010ರಲ್ಲಿ ಜಾರಿಗೆ ಬಂದ ರಾಷ್ಟ್ರೀಯ ಉದ್ಯೋಗ ಖಾತ್ರಿ ಕಾಯ್ದೆಯೂ ಗ್ರಾಮೀಣ ಭಾರತದ ಸಬಲೀಕರಣಕ್ಕೆ ನಾಂದಿ ಹಾಡಿದೆ.

10ನೇ ಪುಟದಿಂದ

ಲಕ್ಷಕ್ಕೆ ಮಾತ್ರ ಹಣಕಾಸು ಒದಗಿಸಿವೆ, 13 ಕೋಟಿ ರೈತರಿದ್ದಾರೆ ಆದರೆ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಯೋಜನೆಗಳು ಕೇವಲ 5.2 ಲಕ್ಷ ರೈತರನ್ನು ತಲುಪಿವೆ ಎಂದರು.

ತಮ್ಮ ಭಾಷಣದಲ್ಲಿ ಕೇಂದ್ರ ಸಚಿವರು ಹಲವು ಹೊಸ ವಿಚಾರಗಳನ್ನು ಪ್ರಸ್ತಾಪಿಸಿದರು. ಇವುಗಳಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಸಹಕಾರಕ್ಕಾಗಿ ಡೇಟಾಬೇಸ್, ಸಹಕಾರ ವಿಶ್ವವಿದ್ಯಾಲಯ, ರೈತರಿಗೆ ಕನಿಷ್ಟ ಬೆಂಬಲ ಬೆಲೆಯಲ್ಲಿ ಅಸಾಧಾರಣ ಏರಿಕೆ ಸೇರಿದಂತೆ ಇತರ ವಿಷಯಗಳನ್ನು ಚರ್ಚಿಸಿದರು.

ಈ ಸಂದರ್ಭದಲ್ಲಿ ಕೇರಳ, ಕರ್ನಾಟಕ, ಗುಜರಾತ್ ಮತ್ತು ಪಶ್ಚಿಮ ಬಂಗಾಳದ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಸಹಕಾರಿ ಬ್ಯಾಂಕುಗಳ ಪ್ರತಿನಿಧಿಗಳನ್ನು ಕೇಂದ್ರ ಸಚಿವ ಅಮಿತ್ ಷಾ ಸನ್ಮಾನಿಸಿ ಗೌರವಿಸಿದರು.

ಇಫ್ಕೋ ಮತ್ತು ಎನ್‌ಸಿಯುಐ ಅಧ್ಯಕ್ಷ ದಿಲೀಪ್ ಸಂಘಾನಿ ಮಾತನಾಡಿದರು. ಸಹಕಾರ ಆಂದೋಲನದಲ್ಲಿ ಯುವಕರನ್ನು ತೊಡಗಿಸಿಕೊಳ್ಳಲು ಕೇಂದ್ರ ಈಶಾನ್ಯ ವಲಯದ ಸಹಕಾರ ಮತ್ತು ಅಭಿವೃದ್ಧಿ ರಾಜ್ಯ ಸಚಿವ ಬಿಎಲ್ ವರ್ಮಾ ಸಲಹೆ ನೀಡಿದರು. ಸಹಕಾರ ಸಚಿವಾಲಯದ ಕಾರ್ಯದರ್ಶಿ ಜ್ಞಾನೇಶ್ ಕುಮಾರ್, ಐಸಿಎ (ಏಷ್ಯಾ) ಅಧ್ಯಕ್ಷ ಡಾ. ಚಂದ್ರಪಾಲ್ ಸಿಂಗ್ ಯಾದವ್, ನಬಾರ್ಡ್ ಅಧ್ಯಕ್ಷ ಆರ್. ಚಿಂತಲಾ ಸೇರಿದಂತೆ ಪ್ರಮುಖರು ಸಹಕಾರಿಗಳು ಉಪಸ್ಥಿತರಿದ್ದರು.

# ಪ್ರಗತಿಯ ಪಥದಲ್ಲಿ ಕಮತಗಿಯ
# ಶ್ರೀ ಹೊಳೆ ಹುಚ್ಚೇಶ್ವರ ಕೋ-ಆಪ್. ಕ್ರೆಡಿಟ್ ಸೊಸಾಯಿಟಿ



1989-90ರ ಅವಧಿಯಲ್ಲಿ ಮಲಪ್ರಭಾ ನದಿ ತಟದಲ್ಲಿರುವ ಹುನಗುಂದ ತಾಲೂಕಿನ ಕಮತಗಿ ಪಟ್ಟಣದಲ್ಲಿ ಆರಾಧ್ಯ ದೈವರಾದ ಶ್ರೀ ಹೊಳೆ ಹುಚ್ಚೇಶ್ವರ ಹೆಸರಿನಲ್ಲಿ 32 ವರ್ಷಗಳ ಹಿಂದೆ ಬಡ ನೇಕಾರ ವರ್ಗದವರಿಂದ ಕಾರ್ಯಾರಂಭಗೊಂಡ ಶ್ರೀ ಹೊಳೆ ಹುಚ್ಚೇಶ್ವರ ಪತ್ತಿನ ಸಹಕಾರ ಸಂಘದ ಕಾರ್ಯ ಸಹಕಾರಿ ಕ್ಷೇತ್ರದಲ್ಲಿ ವಿಶಿಷ್ಟ ಗಮನವನ್ನು ಸೆಳೆದಿದೆ.

ಕೇವಲ 366 ಜನ ಶೇರುದಾರ ಸದಸ್ಯರಿಂದ ರೂ. 3.50 ಲಕ್ಷ ಶೇರು ಬಂಡವಾಳ, ರೂ. 4.55 ಲಕ್ಷ ಠೇವುಗಳೊಂದಿಗೆ ಸನ್ 1989-90 ರಲ್ಲಿ ಬಾಡಿಗೆ ಮಳಿಗೆಯಲ್ಲಿ ಪ್ರಾರಂಭವಾಯಿತು. ಈ ಸಂಸ್ಥೆ ಅನೇಕ ಎಡರು-ತೊಡರುಗಳ ನಡುವೆಯೂ ಮುನ್ನಡೆದು 2012ರ ಅಗಸ್ಟ 9ರಂದು ಸಂಘವು ಹರ-ಗುರು ಚರಮೂರ್ತಿಗಳ ದಿವ್ಯ ಸಾನಿಧ್ಯದಲ್ಲಿ ತನ್ನ ಸ್ವಂತ ಹೈ-ಟೆಕ್ ಕಟ್ಟಡವನ್ನು ಹೊಂದಿತು.



ಶ್ರೀ ಮುರಗೇಶ ಕಡ್ಲಿಮಟ್ಟಿ
ಅಧ್ಯಕ್ಷರು

ಸುಮಾರು 15 ವರ್ಷದಿಂದಲೂ ಸಂಘದ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿರುವ ಸಹಕಾರಿ ರಂಗದ ಧುರೀಣರು ಆದ ಶ್ರೀ ಮುರುಗೇಶ ಕಡ್ಲಿಮಟ್ಟಿಯವರು ಬಹಳ ಮುತ್ಸದ್ದಿತನದಿಂದ ಸಂಘದ ಆಡಳಿತವನ್ನು ನಡೆಸುತ್ತಿದ್ದಾರೆ. ಇವರು ಬಾಗಲಕೋಟ ಡಿ.ಸಿ.ಸಿ ಬ್ಯಾಂಕಿನ ಉಪಾಧ್ಯಕ್ಷರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. ಇವರ ಬದ್ದತೆಯುಳ್ಳ ಮಾರ್ಗದರ್ಶನದಲ್ಲಿ ಸಂಘವು ತನ್ನ 32 ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿ ಬಾಗಲಕೋಟ ಜಿಲ್ಲೆಯ ರಾಂಪೂರ ಪು.ಕೇ., ಗದ್ದನಕೇರಿ ಕ್ರಾಸ್, ಇಲಕಲ್ಲ, ನವನಗರ-ಬಾಗಲಕೋಟ, ಅಮೀನಗಡ, ಗುಳೇದಗುಡ್ಡ, ಬದಾಮಿ, ಕಮತಗಿ-ಬಜಾರ, ಮಹಿಳಾ ಕಮತಗಿ ಮತ್ತು ಗದಗ ಜಿಲ್ಲಾ ಹೊಳೆಆಲೂರ, ರಾಯಚೂರ ಜಿಲ್ಲಾ ಲಿಂಗಸಗೂರು, ಸಿಂಧನೂರ, ಚಿನ್ನದ ಹಟ್ಟಿ, ವಿಜಯಪೂರ ಜಿಲ್ಲಾ ನಿಡಗುಂದಿ ಹಾಗೂ ಕೊಪ್ಪಳ ಜಿಲ್ಲಾ ಹನಮನಾಳ, ಕುಕನೂರ ಗಳಲ್ಲಿ ಹೀಗೆ ಒಟ್ಟು 16 ಶಾಖೆಗಳನ್ನು ಹೊಂದಿರುತ್ತದೆ. ಗದ್ದನಕೇರಿ ಕ್ರಾಸ್ ಶಾಖೆ ಹಾಗೂ ಗುಳೇದಗುಡ್ಡ ಶಾಖೆಗಳು ಸ್ವಂತ ಕಟ್ಟಡವನ್ನು ಹೊಂದಿವೆ. ಅದೇ ರೀತಿ ಹನಮನಾಳದಲ್ಲಿ ಬೆಲೆ ಬಾಳುವ ನಿವೇಶನವನ್ನು ಸಹಿತ ಹೊಂದಿರುತ್ತದೆ.

ಸಂಘವು ಗ್ರಾಹಕರ ಸೇವೆಯಲ್ಲಿ ಪರಿಣಾಮಕಾರಿಯಾಗಿ ಸೇವೆ ಸಲ್ಲಿಸುತ್ತಿದೆ. ಸಂಘದ ಎಲ್ಲ ಶಾಖೆಗಳು ಸಂಪೂರ್ಣ ಗಣೀಕೃತಗೊಂಡಿದ್ದು ಸಿ.ಬಿ.ಎಸ್ (ಕೋರ್ ಬ್ಯಾಂಕಿಂಗ್), ಪ್ರಧಾನ ಕಛೇರಿ ಹಾಗೂ ಗದ್ದನಕೇರಿ ಕ್ರಾಸ್ ಶಾಖೆಯಲ್ಲಿ ಸೇಫ್ ಡೆಪಾಜಿಟ್ ಲಾಕರ್ ಸೌಲಭ್ಯವನ್ನು ಹೊಂದಿರುತ್ತದೆ. ಠೇವಣಿದಾರರಿಗೆ ಸಂಘವು ಆಕರ್ಷಕ ಬಡ್ಡಿದರವನ್ನು ನೀಡುತ್ತಿದೆ. ಅದರಲ್ಲಿ ವಿಶೇಷವಾಗಿ ಚಿಕ್ಕಮಕ್ಕಳ ಭವಿಷ್ಯಕ್ಕೆ ಅನುಕೂಲವಾಗುವ ದೃಷ್ಠಿಯಿಂದ "ಜೇಡರ ದಾಸಿಮಯ್ಯ ಕ್ಯಾಶ್ ಸರ್ಟಿಫಿಕೇಟ್" ಎಂಬ ಠೇವು ಯೋಜನೆಯನ್ನು ಹೊಂದಿದೆ. ಈ ಯೋಜನೆಯಡಿ 13 ವರ್ಷದೊಳಗಿನ ಚಿಕ್ಕಮಕ್ಕಳ ಹೆಸರಿನಿಂದ ತೊಡಗಿಸಿದ ರೂ. 1,00,000.00ಗಳು 13 ವರ್ಷಗಳಲ್ಲಿ ರೂ. 5,00,000.00 ಗಳಾಗುತ್ತವೆ. (ಕನಿಷ್ಠ ರೂ. 5,000.00ಗಳ ಗುಣಕಗಳಲ್ಲಿ ಅನಿಯಮಿತವಾಗಿ ತೊಡಗಿಸ ಬಹುದು.) ಸಾಲಗಾರರ ಜೊತೆಗೆ ಸಂಘದ ಆಡಳಿತ ಮಂಡಳಿ ಸಿಬ್ಬಂದಿ ಸಹೋದರತೆ, ಸೌಹಾರ್ದಯುತವಾದ ಸಂಬಂಧವನ್ನು ಹೊಂದಿದೆ. ಶೇರುದಾರ ಸದಸ್ಯರಿಗೆ ಪ್ರತಿ ವರ್ಷ ನ್ಯಾಯಯುತ ಕರಾರು ಬದ್ಧವಾಗಿ ನೀಡಬೇಕಾದ ಡಿವ್ಹಿಡೆಂಡ್ ಅನ್ನು ಸಮಯಕ್ಕೆ ಸರಿಯಾಗಿ ವಿತರಣೆ ಮಾಡುವ ಮೂಲಕ ಗ್ರಾಹಕರ ಹಾಗೂ ಶೇರುದಾರ-ರಿಂದ ಮೆಚ್ಚುಗೆಗೆ ಪಾತ್ರವಾಗಿರುವುದನ್ನು ಅವಲೋಕಿಸಿದರೆ ಸಂಘದ ಪಾರದರ್ಶಕ ಆಡಳಿತವನ್ನು ಸಾಕ್ಷಿಕರಿಸುತ್ತದೆ.

**ಶಾಖೆಗಳು :** ರಾಂಪೂರ ಪು.ಕೇಂ, ಗದ್ದನಕೇರಿ ಕ್ರಾಸ್, ಇಲಕಲ್ಲ,

| ಸಾಂಪತ್ತಿಕ ಸ್ಥಿತಿ ದಿನಾಂಕ : 31-03-2022ಕ್ಕೆ ಇದ್ದಂತೆ (ರೂ.ಲಕ್ಷಗಳಲ್ಲಿ) (ತಾತ್ಕಾಲಿಕ) | |
|---|---|
| ಸದಸ್ಯರ ಸಂಖ್ಯೆ | 8222 |
| ಶೇರು ಬಂಡವಾಳ | ರೂ.539.78 |
| ಕಾಯ್ದಿಟ್ಟ ನಿಧಿ & ಇತರ ನಿಧಿಗಳು | ರೂ.688.47 |
| ಠೇವುಗಳು | ರೂ.26926.11 |
| ಸಾಲಗಳು | ರೂ.17924.50 |
| ಬ್ಯಾಂಕ ಗುಂತಾವಣೆಗಳು | ರೂ.8796.66 |
| ದುಡಿಯುವ ಬಂಡವಾಳ | ರೂ.28512.82 |
| ವಾರ್ಷಿಕ ವಹಿವಾಟು | ರೂ.140224.42 |
| ನಿವ್ವಳ ಲಾಭ | ರೂ.213.64 |

ಕಮತಗಿ ಬಜಾರ್, ಹೊಳೆಆಲೂರ, ಹನಮನಾಳ, ಲಿಂಗಸುಗೂರ, ನವನಗರ-ಬಾಗಲಕೋಟ, ಅಮೀನಗಡ, ಗುಳೇದಗುಡ್ಡ, ಸಿಂಧನೂರ, ಹಟ್ಟಿ(ಚಿನ್ನದ ಗಣಿ), ಕುಕನೂರ, ನಿಡಗುಂದಿ, ಬದಾಮಿ ಹಾಗೂ ಕಮತಗಿ ಮಹಿಳಾ ಶಾಖೆ.

**ಸೌಲಭ್ಯಗಳು :**

- ಕೋರ್ ಬ್ಯಾಂಕಿಂಗ್ ಸೌಲಭ್ಯವನ್ನು ಹೊಂದಿದೆ.
- ಎಲ್ಲ ಶಾಖೆಗಳು ಗಣಕೀಕೃತ, ಇಲಕಲ್ಲ, ಗದ್ದನಕೇರಿ ಕ್ರಾಸ್ ಹಾಗೂ ಹೊಳೆ-ಆಲೂರ ಶಾಖೆಗಳಲ್ಲಿ ಇ-ಸ್ಟಾಂಪ್, ಪ್ರಧಾನ ಕಛೇರಿ ಹಾಗೂ ಗದ್ದನಕೇರಿ ಕ್ರಾಸ್ ಶಾಖೆಯಲ್ಲಿ ಸೇಫ್ ಡಿಪಾಜಿಟ್ ಲಾಕರ್ ಸೌಲಭ್ಯವಿದೆ.
- ಎಲ್ಲ ಶಾಖೆಗಳಲ್ಲಿ NEFT/RTGS, ಸೌಲಭ್ಯವಿರುತ್ತದೆ.
- 13 ವರ್ಷದ ಒಳಗಿನ ಮಕ್ಕಳ ಉಜ್ವಲ ಭವಿಷ್ಯಕ್ಕಾಗಿ "ಜೇಡರ ದಾಸಿಮಯ್ಯ ಕ್ಯಾಶ್ ಸರ್ಟಿಫಿಕೇಟ್" ಠೇವು ಯೋಜನೆಯಲ್ಲಿ ತೊಡಗಿಸಿದ ರೂ.5000/-ಗಳು 13 ವರ್ಷದಲ್ಲಿ ರೂ.25,000/- ಸಿಗುವದು. (ರೂ.5000/-ಗಳ ಗುಣಕಗಳಲ್ಲಿರಬೇಕು.)
- ಸಾಮಾನ್ಯರಿಗೆ 6 ವರ್ಷ 3 ತಿಂಗಳು ಹಾಗೂ ಹಿರಿಯ ನಾಗರಿಕರಿಗೆ 6 ವರ್ಷಗಳಲ್ಲಿ ಠೇವು ದ್ವಿಗುಣಗೊಳ್ಳುವದು.
- ರಜತ ಮಹೋತ್ಸವ ಕ್ಯಾಶ್ ಸರ್ಟಿಫಿಕೇಟ್ ನಲ್ಲಿ ತೊಡಗಿಸಿದ ಹಣ 10 ವರ್ಷದಲ್ಲಿ 3 ಪಟ್ಟಗಿಂತಲೂ ಹೆಚ್ಚಿಗೆ ಪಡೆಯುವರು.
- ಸದಸ್ಯರ ರೂ. 10 ಲಕ್ಷಗಳ ಬಲ್ಕ ಠೇವಣಿಗಳಿಗೆ ಶೇ 0.50% ಹೆಚ್ಚಿನ ಬಡ್ಡಿ ನೀಡಲಾಗುವದು.

**ಆಡಳಿತ ಮಂಡಳಿ ಸದಸ್ಯರು**

**ಅಧ್ಯಕ್ಷರು : ಶ್ರೀ ಮುರಗೇಶ.ಆಯ್.ಕಡ್ಲಿಮಟ್ಟಿ**

**ಉಪಾಧ್ಯಕ್ಷರು : ಶ್ರೀ ಮಲ್ಲಪ್ಪ.ಟಿ.ಮೇದಾರ**

**ನಿರ್ದೇಶಕರುಗಳು :**

ಶ್ರೀ ಮಲ್ಲಪ್ಪ.ಎನ್.ಲೆಕ್ಕದ,
ಶ್ರೀ ಹುಚ್ಚಪ್ಪ.ಎಸ್.ಸಿಂಹಾಸನ,
ಶ್ರೀ ಕಮಲಪ್ಪ.ಸಿ.ಕಡ್ಲಿಮಟ್ಟಿ,
ಶ್ರೀ ರಮೇಶ.ಎಸ್.ಜಮಖಂಡಿ,
ಶ್ರೀ ಹನಮಂತಪ್ಪ.ಎಫ್.ಕಡಿವಾಲ,
ಶ್ರೀ ಹುಚ್ಚೇಶ.ಆಯ್.ಗೋಕಾವಿ,
ಶ್ರೀ ಮಹಾಂತೇಶ ಎಸ್ ಕಡ್ಲಿಮಟ್ಟಿ,
ಶ್ರೀಮತಿ ಬಸವ್ವ ಎಸ್ ಕೋಳೂರ
ಶ್ರೀಮತಿ ಸುಧಾ ಜಿ ಕ್ಯಾದಿಗ್ಗೇರಿ
ಶ್ರೀ ಹನಮಂತ ಎಸ್ ವಡ್ಡರ

**ಪ್ರಧಾನ ವ್ಯವಸ್ಥಾಪಕರು : ಶ್ರೀ ಶಿವಶಂಕರ ಬಿ ಮಾಶೆಟ್ಟಿ**

# ಕಳೆದ 8 ವರ್ಷದಲ್ಲಿ ರೂಪಾಯಿ ಮೌಲ್ಯ ಶೇ. 25 ಕುಸಿತ: ಕೇಂದ್ರ ಮಾಹಿತಿ


**ನವದೆಹಲಿ**: ರೂಪಾಯಿ ಮೌಲ್ಯ ಕುಸಿಯುತ್ತಿರುವುದು ಇತ್ತೀಚೆಗೆ ಹೆಚ್ಚುತ್ತಿದೆ. ಕೇಂದ್ರ ಸರಕಾರವೇ ನೀಡಿರುವ ಮಾಹಿತಿ ಪ್ರಕಾರ ಕಳೆದ 8 ವರ್ಷದಲ್ಲಿ ರೂಪಾಯಿ ಮೌಲ್ಯ ಶೇ. 25ರಷ್ಟು ಕುಸಿದಿದೆ. 2014ರಿಂದೀಚೆ ರೂಪಾಯಿ ಮೌಲ್ಯ 16.08 ರೂ ಇಳಿದಿದೆ. 2014ರಲ್ಲಿ ವಿನಿಮಯ ಮಾರುಕಟ್ಟೆಯಲ್ಲಿ ಒಂದು ಡಾಲರ್‌ಗೆ 63.33 ರೂ ದರ ಇತ್ತು. ಈಗ 2022 ಜುಲೈ 11ರಲ್ಲಿ ಅದು 79.41 ರೂ ಆಗಿದೆ. ಈ ಮಾಹಿತಿಯನ್ನು ಹಣಕಾಸು ಸಚಿವಾಲಯ ಮುಂಗಾರು ಅಧಿವೇಶನದ ಮೊದಲ ದಿನದಂದು ಸಂಸತ್ ಮುಂದಿಟ್ಟಿದೆ.

ಲೋಕಸಭಾ ಸದಸ್ಯರಾದ ದೀಪಕ್ ಬೈಜ್ ಮತ್ತು ವಿಜಯ್ ವಸಂತ್ ಅವರು ಭಾರತದ ರೂಪಾಯಿ ಕರೆನ್ಸಿಯ ಮೌಲ್ಯ ಕುಸಿತದ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರವಾಗಿ ಹಣಕಾಸು ಸಚಿವಾಲಯವು 2014ರಿಂದೀಚೆಗೆ ಪ್ರತಿ ವರ್ಷಾಂತ್ಯದಲ್ಲಿ ರೂಪಾಯಿ ಮೌಲ್ಯ ಎಷ್ಟಿತ್ತೆಂಬ ಮಾಹಿತಿಯನ್ನು ನೀಡಿದೆ. ಅದರ ಪ್ರಕಾರ 2014 ಡಿಸೆಂಬರ್ 31ರಂದು ಡಾಲರ್ ಎದುರು ರೂಪಾಯಿ ಮೌಲ್ಯ 63.33 ಇತ್ತು. 2018ರಲ್ಲಿ ಅದು 69.79 ಕ್ಕೆ ಏರಿದೆ.



2019ರಲ್ಲಿ 70ರ ಗಡಿ ದಾಟಿದೆ. ಈಗ ಅದು 80ರ ಗಡಿ ಮುಟ್ಟಿದೆ.

ಡಾಲರ್ ಎದುರು ರೂಪಾಯಿ 80 ಗಡಿ ದಾಟಿದೆ. ರೂಪಾಯಿ ಈ ಹಂತಕ್ಕೆ ಬಂದಿದ್ದು ಇದೇ ಮೊದಲು. ಯೂರೋಪಿಯನ್ ಸೆಂಟ್ರಲ್ ಬ್ಯಾಂಕ್ ಬಡ್ಡಿ ದರಗಳನ್ನು ಹೆಚ್ಚಿಸಬಹುದು ಎಂಬ ನಿರೀಕ್ಷೆಯಲ್ಲಿ ಯೂರೋಪ್ ದೇಶಗಳ ಕರೆನ್ಸಿಗಳು ಪುಷ್ಟಿ ಪಡೆದಿದ್ದವು. ಇದರ ಪರೋಕ್ಷ ಪರಿಣಾಮವಾಗಿ ಡಾಲರ್ ಎದುರು ರೂಪಾಯಿ ಮೌಲ್ಯದಲ್ಲಿ ಅಲ್ಪ ಏರಿಕೆಯಾಗಿತ್ತು. ನಂತರ ಕೆಲವೇ ಹೊತ್ತಿನಲ್ಲಿ ಡಾಲರ್ ಎದುರು ರೂಪಾಯಿ ಮೌಲ್ಯ ಕುಸಿದಿದೆ.



# ಸಹಕಾರ ಮಾರ್ಗದರ್ಶಿ : ಆಧುನಿಕ ಸಹಕಾರ ಚಳುವಳಿಯ ಉಗಮ

▸▸ **ಬಸವೇಗೌಡ,** ನಿವೃತ್ತ ಅಪರ ನಿಬಂಧಕರು ಹಾಗೂ ಅಧ್ಯಕ್ಷರು, ಕರ್ನಾಟಕ ಪ್ರಗತಿಪರ ಸಹಕಾರಿಗಳ ವೇದಿಕೆ (ರಿ.) ಬೆಂಗಳೂರು.

... ಹಿಂದಿನ ಸಂಚಿಕೆಯಿಂದ

ಸಂಸ್ಥೆಯು ಅತಿಸಣ್ಣ ಮತ್ತು ಸಣ್ಣ ಉದ್ಯಮಿಗಳಿಗೆ ನೀಡಲಾದ ಕೈಗಾರಿಕೆ/ವ್ಯವಹಾರ ಅಥವಾ ಸೇವೆಗೆ ಸಂಬಂಧಿಸಿದ 100 ಲಕ್ಷ ರೂ. ವರೆಗಿನ ಸಾಲಗಳಿಗೆ ಖಾತರಿಯನ್ನು ನೀಡುತ್ತದೆ. ಎಂದರೆ, ಸಾಲಗಾರನು ಸಾಲದ ಹಣವನ್ನು ತೀರಿಸದಿದ್ದರೆ ಖಾತರಿ ಸಂಸ್ಥೆಯು, ಕೆಲವು ನಿಬಂಧನೆಗಳಿಗೆ ಒಳಪಟ್ಟು, ಸಾಲದ ಮರುಪಾವತಿ ಮಾಡುವ ಭರವಸೆ ನೀಡುತ್ತದೆ. ಸಂಸ್ಥೆಯ ಸದಸ್ಯ ಬ್ಯಾಂಕುಗಳಿಗೆ ಮಾತ್ರ ಖಾತರಿ ಲಭ್ಯ. ಬಹುತೇಕ ಎಲ್ಲ ವಾಣಿಜ್ಯ ಬ್ಯಾಂಕುಗಳು ಹಾಗೂ ಅನೇಕ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಸಂಸ್ಥೆಯ ಸದಸ್ಯತ್ವ ಹೊಂದಿವೆ.

ವಾಣಿಜ್ಯ ಬ್ಯಾಂಕುಗಳು/ಕೆಲವು ನಿರ್ದಿಷ್ಟ ಹಣಕಾಸು ಸಂಸ್ಥೆಗಳು ನೀಡುವ 100 ಲಕ್ಷ ರೂ.ವರೆಗಿನ ಸಾಲಗಳಿಗೆ ಮತ್ತು ಗ್ರಾಮೀಣ ಬ್ಯಾಂಕುಗಳು/ಇತರ ಹಣಕಾಸು ಸಂಸ್ಥೆಗಳು ನೀಡುವ 50 ಲಕ್ಷ ರೂ. ವರೆಗಿನ ಸಾಲಗಳಿಗೆ ಸಂಸ್ಥೆಯು ಸಾಲದ ಮೊತ್ತದ ಮೇಲೆ ಶೇ.75 ರಿಂದ ಶೇ.85 ರವರೆಗೆ ಖಾತರಿ ನೀಡುತ್ತದೆ. ಮಹಿಳಾ ಉದ್ಯಮಿಗಳಿಗೆ ಹಾಗೂ ಈಶಾನ್ಯ ಪ್ರದೇಶದ ಉದ್ಯಮಗಳಿಗೆ ಶೇ.80; ಅತಿಸಣ್ಣ ಹಾಗೂ ಸಣ್ಣ ಉದ್ಯಮಿಗಳಿಗೆ ಬ್ಯಾಂಕುಗಳು ನೀಡುವ 5 ಲಕ್ಷ ರೂ.ವರೆಗಿನ ಸಾಲಗಳಿಗೆ ಶೇ.85 ರಷ್ಟು ಖಾತರಿ ಲಭ್ಯವಾಗುವುದು.

- ಅತಿಸಣ್ಣ ಅಥವಾ ಸಣ್ಣ ಕೈಗಾರಿಕಾ ಘಟಕಗಳಿಗೆ, ಸಣ್ಣ ಕೈಗಾರಿಕೆಗಳಿಗೆ ಸೇವೆ ಒದಗಿಸುವ ಘಟಕಗಳಿಗೆ, ನಿರ್ದಿಷ್ಟಪಡಿಸಿದ ಹಲವು ವ್ಯವಹಾರಕ್ಕಾಗಿ ನೀಡಿದ ಸಾಲಗಳಿಗೆ ಮಾತ್ರ ಖಾತರಿ.
- ಸಾಲಕ್ಕೆ ಸರಕಾರದ ಅಥವಾ ಬೇರೆ ಸಂಸ್ಥೆಯ ಖಾತರಿ ಇದ್ದರೆ ಈ ಸಂಸ್ಥೆಯ ಖಾತರಿ ಇಲ್ಲ.
- ಸಾಲದ ಮೇಲೆ ಬ್ಯಾಂಕು ವಿಧಿಸುವ ಬಡ್ಡಿದರವು ಸಾಲಿಗ ಬ್ಯಾಂಕಿನ ಮುಖ್ಯ ಸಾಲ ದರ (prime lending rate) +3% ಗಿಂತ ಅಧಿಕವಾಗಿರಬಾರದು.
- ಸಾಲಕ್ಕೆ ಆನುಷಂಗಿಕ ಭದ್ರತೆ [collateral security] ಅಥವಾ ಮೂರನೇ ವ್ಯಕ್ತಿಯಿಂದ ಜಾಮೀನು ಪಡೆದುಕೊಂಡಿದ್ದರೆ ಸಂಸ್ಥೆಯ ಖಾತರಿ ಸಿಗುವುದಿಲ್ಲ.

ಉದ್ಯಮಿಗೆ ಸಾಲ ಮಂಜೂರಾದ ತ್ರೈಮಾಸಿಕ ಅವಧಿಯ ನಂತರದ ತ್ರೈಮಾಸಿಕ ಅವಧಿ ಮುಗಿಯುವುದರೊಳಗೆ ನಿಗದಿತ ಶಿಲ್ಕು ಪಾವತಿ ಮಾಡಿ ಬ್ಯಾಂಕುಗಳು ಖಾತರಿಯ ಸೌಲಭ್ಯ ಪಡೆದುಕೊಳ್ಳಬಹುದು. ಆರಂಭ ಶುಲ್ಕ ಮಂಜೂರಾದ ಸಾಲದ ಮೊತ್ತದ ಶೇ.1.5 ರಷ್ಟು ಇದ್ದು ವಾರ್ಷಿಕ ಸೇವಾ ಶುಲ್ಕವೂ ಇರುತ್ತದೆ. (ಪ್ರತಿ ವರ್ಷದ) ಮಾರ್ಚ್ 31ರಂದು ಸಾಲಖಾತೆಯಲ್ಲಿ ಇರುವ ಬಾಕಿಯ ಮೇಲೆ, 5 ಲಕ್ಷ ರೂಗೆ ಮೇಲ್ಪಟ್ಟ ಸಾಲಗಳಿಗೆ ಶೇ. 0.75 ರಷ್ಟು ಮತ್ತು 5 ಲಕ್ಷ ರೂ.ವರೆಗಿನ ಸಾಲಗಳಿಗೆ ಶೇ. 0.5 ರಷ್ಟು, ಶುಲ್ಕವನ್ನು ಅದೇ ವರ್ಷದ ಮೇ ತಿಂಗಳ ಕೊನೆಯ ಒಳಗಾಗಿ ಪಾವತಿ ಮಾಡಬೇಕು. ಈ ಶುಲ್ಕವನ್ನು ಸಾಲಗಾರರು ಭರಿಸಬೇಕಾಗುತ್ತದೆ. ಅತಿಸಣ್ಣ ಸಾಲಗಳಿಗೆ ನೀಡುವ ಖಾತರಿ ಶುಲ್ಕವನ್ನು ಬ್ಯಾಂಕುಗಳೇ ಭರಿಸಬೇಕೆಂಬುದು ರಿಸರ್ವ್ ಬ್ಯಾಂಕಿನ ಆದೇಶ.

ಖಾತರಿ ಶುಲ್ಕ ಪಾವತಿಯಾದ ದಿನದಿಂದ ಆರಂಭಿಸಿ (ಅವಧಿ ಸಾಲವಾದರೆ) ಸಾಲದ ಅವಧಿ ಮುಗಿಯುವವರೆಗೂ ಹಾಗೂ ದುಡಿಮೆ ಬಂಡವಾಳ [working capital] ಸಾಲವಾಗಿದ್ದರೆ 5 ವರ್ಷದವರೆಗೂ ಖಾತರಿಯು ಚಾಲ್ತಿಯಲ್ಲಿರುತ್ತದೆ. ಮಂಜೂರಾದ ಸಾಲದ ಕೊನೆಯ ಭಾಗವನ್ನು ಬ್ಯಾಂಕು ವಿತರಿಸಿದ 18 ತಿಂಗಳು ಅಥವಾ ಸಂಸ್ಥೆಯ ಖಾತರಿ ರಕ್ಷೆಯನ್ನು ಪಡೆದ 18 ತಿಂಗಳು ಇವುಗಳಲ್ಲಿ ಯಾವುದು ಕೊನೆಯದೋ ಅಲ್ಲಿಯವರೆಗೆ ಖಾತರಿಯ ಮೇಲೆ ಕ್ಲೇಮುಗಳನ್ನು ಸ್ವೀಕರಿಸಲಾಗುವುದಿಲ್ಲ. ಸ್ವೀಕೃತವಾದ ಕ್ಲೇಮುಗಳನ್ನು ಪರಿಶೀಲಿಸಿ ಖಾತರಿ ಹಣದ ಶೇ.75 ರಷ್ಟನ್ನು ಸಂಸ್ಥೆಯು ತತ್ ಕ್ಷಣ ಬ್ಯಾಂಕಿಗೆ ನೀಡುವುದು; ಉಳಿದ ಹಣಮತ್ತಷ್ಟು ಪರಿಶೀಲನೆಯ ನಂತರ ನೀಡಲಾಗುವುದು.

ಉದ್ದರಿ ಖಾತರಿ ಸಂಸ್ಥೆಯ ಈ ಖಾತರಿ ಯೋಜನೆಯಿಂದ, ಅತಿಸಣ್ಣ ಹಾಗೂ ಸಣ್ಣ ಉದ್ಯಮಿಗಳಿಂದ ಆಧಾರವನ್ನು ಅಥವಾ 3ನೇ ವ್ಯಕ್ತಿಯ ಜಾಮೀನನ್ನು ಪಡೆದುಕೊಳ್ಳದೆ ಕೈಗೊಂಡ ಚಟುವಟಿಕೆಯ ಆರ್ಥಿಕ ಜೀವಂತಿಕೆ [economic viability] ಮುಂತಾದವನ್ನು ಮಾತ್ರ ವಸ್ತುನಿಷ್ಠವಾಗಿ ಪರಿಶೀಲಿಸಿ ಸಾಲ ನೀಡಲು ಬ್ಯಾಂಕುಗಳಿಗೆ ಸಾಧ್ಯವಾಗಿದೆ. ಉದ್ಯಮಿಗಳಿಗೆ ಒದಗುವ ಅನುಕೂಲದ ವಿಷಯ ಹೇಳಬೇಕಾಗಿಯೇ ಇಲ್ಲ.

ಇದೇನೇ ಇರಲಿ, ಸಾಲ ಮರುಪಾವತಿಯ ಜವಾಬ್ದಾರಿ ಸಾಲಗಾರನಿಗೆ ಇದ್ದೇ ಇರುತ್ತದೆ. ಬ್ಯಾಂಕುಗಳು ಕೂಡ ಸೂಕ್ತ ಕ್ರಮ ಜರುಗಿಸಿ ಸಾಲದ ಬಾಕಿ ಹಣವನ್ನು ವಸೂಲಾತಿ ಮಾಡಬೇಕು. ಬ್ಯಾಂಕು CGTMSE ಯಿಂದ ಹಣವನ್ನು ಕ್ಲೇಮು ಮಾಡಿ ಪಡೆದಿದ್ದರೆ ಸಾಲಗಾರನಿಂದ (ಆಮೇಲೆ) ವಸೂಲಾದ ಹಣದಲ್ಲಿ ಉದ್ದರಿ ಸಂಸ್ಥೆಯು ನೀಡಿರುವ ಭಾಗವನ್ನು ಸಂಸ್ಥೆಗೆ ವಾಪಸು ಹಿಂದಿರುಗಿಸಬೇಕಾಗುವುದು.

### ಕೆ.ವೈ.ಸಿ. ಹಾಗೂ ಧನ ಧವಳೀಕರಣ ನಿವಾರಣಾ ಅಧಿನಿಯಮ [KYC & AMLA]

**ಕೆ.ವೈ.ಸಿ./ ನಿಮ್ಮ ಗ್ರಾಹಕರನ್ನು ತಿಳಿಯಿರಿ :** ತಮ್ಮ ಗ್ರಾಹಕರ ಸ್ಪಷ್ಟ ಪರಿಚಯ ಮತ್ತು ವಿಳಾಸವನ್ನು ಬ್ಯಾಂಕುಗಳು ಖಚಿತವಾಗಿ ತಿಳಿದುಕೊಂಡಿರಬೇಕೆಂಬ ಆಶಯದಿಂದ ರಿಸರ್ವ್ ಬ್ಯಾಂಕು 'ನಿಮ್ಮ ಗ್ರಾಹಕರನ್ನು ತಿಳಿಯಿರಿ' [Know Your Customer] ಎಂದು ಬ್ಯಾಂಕುಗಳಿಗೆ ವಿವರವಾದ ಆದೇಶಗಳನ್ನು ನೀಡಿದೆ. ಈ ಆದೇಶಗಳು 2001 ರಿಂದ ಜಾರಿಯಲ್ಲಿವೆ. ಗ್ರಾಹಕನ ಪರಿಚಯವನ್ನು

ಖಚಿತಪಡಿಸಿಕೊಳ್ಳಲು ಪಾಸ್ ಪೋರ್ಟ್, ಡ್ರೈವಿಂಗ್ ಲೈಸನ್ಸ್, (ಆದಾಯ ತೆರಿಗೆ ಇಲಾಖೆಯವರು ನೀಡುವ) ಪ್ಯಾನ್ ಕಾರ್ಡು, ಆಧಾರ್ ಕಾರ್ಡು, ಉದ್ಯೋಗದಾತರು ನೀಡುವ ಗುರುತಿನ ಕಾರ್ಡ್– ಇಂಥ ಯಾವುದಾದರೂ ಒಂದು ದಾಖಲೆಯನ್ನು ಬ್ಯಾಂಕು ಪರಿಶೀಲಿಸಿ ಅದರ ನಕಲನ್ನು ತನ್ನಲ್ಲಿ ಇರಿಸಿಕೊಂಡಿರಬೇಕು. ಇದಲ್ಲದೆ ಗ್ರಾಹಕನ ವಿಳಾಸವನ್ನು ಖಚಿತಪಡಿಸಿಕೊಳ್ಳಲು ಅವರ ನಿವಾಸದ ದೂರವಾಣಿ ಬಿಲ್, ನೀರಿನ ಬಿಲ್, ಅಡುಗೆ ಅನಿಲ ಸಂಪರ್ಕದ ರಸೀತಿ, ಮನೆಯ ಬಾಡಿಗೆ ಒಪ್ಪಂದ ಪತ್ರ, ಪಾಸ್ ಪೋರ್ಟ್ ಮುಂತಾದ ದಾಖಲೆಗಳಲ್ಲಿ ಯಾವುದಾದರೂ ಒಂದನ್ನು ಪರಿಶೀಲಿಸಿ ಅದರ ನಕಲನ್ನು ಇರಿಸಿಕೊಳ್ಳಬೇಕು.

ಆರ್ಥಿಕವಾಗಿ ಹಿಂದುಳಿದವರು, ಗ್ರಾಮೀಣ ಪ್ರದೇಶದ ಜನರು, ಕೂಲಿ ಕಾರ್ಮಿಕರು, ಕೊಳಚೆಪ್ರದೇಶಗಳ ನಿವಾಸಿಗಳು, ದಿವ್ಯಾಂಗರು ಮತ್ತು ದುರ್ಬಲವರ್ಗಗಳಿಗೆ ಸೇರಿದ ಹಲವರಲ್ಲಿ ಇಂಥ ದಾಖಲೆಗಳು ಇಲ್ಲದಿರಬಹುದು. ಅಂಥವರ ಖಾತೆಗಳನ್ನು ತೆರೆಯಲು ತೊಂದರೆಯಾಗುವುದನ್ನು ತಪ್ಪಿಸಲು ರಿಸರ್ವ್ ಬ್ಯಾಂಕ್ ಈ ನಿಯಮಗಳನ್ನು ಸಡಿಲಗೊಳಿಸಿದೆ. ಶಾಖಾ ವ್ಯವಸ್ಥಾಪಕರಿಗೆ ಗ್ರಾಹಕನ ಪರಿಚಯ/ವಿಳಾಸ ಕುರಿತು ಸಮಾಧಾನವಾಗುವಂತಿದ್ದರೆ ಲಭ್ಯವಾಗುವ ಯಾವುದೇ ರೀತಿಯ ದಾಖಲೆಯನ್ನು ಪರಿಶೀಲಿಸಿ ಖಾತೆ ತೆರಯಲು ಅನುವು ಮಾಡಿಕೊಡಬಹುದು. ಆದರೆ ಇಂಥ ಖಾತೆಗಳ ಶಿಲ್ಕು ಯಾವುದೇ ಸಂದರ್ಭದಲ್ಲಿ ರೂ.50000/– ಮೀರಕೂಡದು, ಒಂದು ತಿಂಗಳಲ್ಲಿ ಒಟ್ಟು ಹಣ ಹಿಂಪಡೆತ ರೂ.10000/ ಮೀರಬಾರದು ಹಾಗೂ ಖಾತೆಯಲ್ಲಿನ ಜಮಾ ನಮೂದುಗಳ ಮೊತ್ತ (ಒಂದು ವರ್ಷದಲ್ಲಿ) ಒಂದು ಲಕ್ಷಕ್ಕೆ ಮೀರದಂತಿರಬೇಕೆಂದೂ ರಿಸರ್ವ್ ಬ್ಯಾಂಕು ಆದೇಶಿಸಿದೆ. ಒಂದು ವೇಳೆ ಅಂಥ ಸಂದರ್ಭ ಒದಗುವುದಾದರೆ ಗ್ರಾಹಕನು ತನ್ನ ಪರಿಚಯ ಮತ್ತು ವಿಳಾಸಕ್ಕೆ ಸೂಕ್ತವಾದ ದಾಖಲೆಗಳನ್ನು ಒದಗಿಸಲೇಬೇಕಾಗುತ್ತದೆ. ಬ್ಯಾಂಕ್ ವಂಚನೆಗಳನ್ನು ತಪ್ಪಿಸುವ ದೃಷ್ಟಿಯಿಂದ ಹಾಗೂ ಬೇನಾಮಿ ಖಾತೆಗಳನ್ನು ತೆರೆದು ತರಿಗೆ ವಂಚನೆ ಮುಂತಾದ ಅವ್ಯವಹಾರ ನಡೆಸುವುದನ್ನು ತಡೆಗಟ್ಟುವ ಉದ್ದೇಶದಿಂದ ಈ ನಿಯಮಗಳನ್ನು ಜಾರಿಗೆ ತರಲಾಗಿದೆ.

**ಧನ ಧವಳೀಕರಣ ನಿವಾರಣೆ [Prevention of Money Laundering] :** ಕಾನೂನಿಗೆ ವಿರುದ್ಧವೆನಿಸಿದ ರೀತಿಯಲ್ಲಿ ಹಣ ಗಳಿಸಿ ಅಂಥ ಹಣವನ್ನು ಸಕ್ರಮ ಹಣವಾಗಿ ಪರಿವರ್ತಿಸಿಕೊಳ್ಳಲು ಬ್ಯಾಂಕ್ ಖಾತೆಗಳನ್ನು ಬಳಸಿಕೊಳ್ಳುವುದನ್ನು ತಪ್ಪಿಸಲು ಧನ ಧವಳೀಕರಣ ನಿವಾರಣಾ ಅಧಿನಿಯಮವನ್ನು 2002 ರಲ್ಲಿ ಜಾರಿಗೊಳಿಸಲಾಯಿತು. ಬ್ಯಾಂಕ್ ಖಾತೆಗಳನ್ನು ಭಯೋತ್ಪಾದನೆ ಮುಂತಾದ ಸಮಾಜವಿರೋಧೀ ಚಟುವಟಿಕೆಗಳಿಗೆ ಬಳಸಿಕೊಳ್ಳುವುದನ್ನು ತಪ್ಪಿಸುವುದು ಸಹ ಈ ಅಧಿನಿಯಮದ ಒಂದು ಉದ್ದೇಶ. ಈ ಅಧಿನಿಯಮದಂತೆ ಬ್ಯಾಂಕುಗಳು

1. ಹತ್ತು ಲಕ್ಷ ರೂಪಾಯಿಗೆ ಮೇಲ್ಪಟ್ಟ ಯಾವುದೇ ರೀತಿಯ ನಗದು ವಹಿವಾಟಿನ ಮೊತ್ತವು ಒಂದು ಬಾರಿಗೆ 10 ಲಕ್ಷ ರೂ. ಮೀರಿದ್ದರೆ; ಅಥವಾ ಖಾತೆಯೊಂದರಲ್ಲಿ ಒಂದು ತಿಂಗಳ ಅವಧಿಯಲ್ಲಿನ ನಗದು ಜಮಾ ವಹಿವಾಟುಗಳ ಒಟ್ಟು ಮೊತ್ತ ಅಥವಾ ನಗದು ಹಣ ಹಿಂಪಡೆತ ವಹಿವಾಟುಗಳ ಒಟ್ಟು ಮೊತ್ತ 10 ಲಕ್ಷ ರೂ. ಮೀರಿದ್ದರೆ;
2. ಎ) ಖಾತೆಗೆ ಜಮಾ ಮಾಡಲು ಅಥವಾ ಡ್ರಾಫ್ಟ್ ಮುಂತಾದವನ್ನು ಖರೀದಿಸಲು ನಕಲಿ ನೋಟುಗಳನ್ನು ಬ್ಯಾಂಕಿಗೆ ನೀಡಿದ್ದರೆ; ಅಥವಾ ಬಿ) ನಕಲಿ ದಾಖಲೆಗಳನ್ನು ಸೃಷ್ಟಿಸಿ ಖಾತೆಗಳಿಂದ ಹಣವನ್ನು ನಗದಾಗಿ ಪಡೆದುಕೊಂಡಿದ್ದರೆ; ಅಥವಾ ಸಿ) ಬ್ಯಾಂಕಿನ ದೃಷ್ಟಿಯಲ್ಲಿ ಯಾವುದೇ ಖಾತೆಯಲ್ಲಿನ (ನಗದು ಅಥವಾ ನಗದೇತರ) ವಹಿವಾಟುಗಳು ಸಂಶಯಾಸ್ಪದವಾಗಿದ್ದರೆ

ಅಂಥ ವಹಿವಾಟುಗಳನ್ನು ಕೇಂದ್ರ ಹಣಕಾಸು ಸಚಿವಾಲಯದ ಹಣಕಾಸು ಗುಪ್ತಚರ ಘಟಕಕ್ಕೆ [Financial Intelligence Unit] ವರದಿ ಮಾಡಬೇಕು. ಮೇಲೆ ಕಾಣಿಸಿದ ಮೊದಲ ವರ್ಗದಲ್ಲಿ ಹೇಳಲಾದ ವಹಿವಾಟುಗಳನ್ನು ಮಾಸಿಕವಾಗಿಯೂ ಎರಡನೆಯ ವರ್ಗದ ವಹಿವಾಟುಗಳನ್ನು ಅವು ಗಮನಕ್ಕೆ ಬಂದ 7 ದಿನಗಳೊಳಗಾಗಿಯೂ ವರದಿ ಮಾಡಬೇಕು. ಎಲ್ಲ ರೀತಿಯ ಬ್ಯಾಂಕು ಹಾಗೂ ಹಣಕಾಸು ಸಂಸ್ಥೆಗಳಿಗೆ ಇದು ಅನ್ವಯವಾಗುತ್ತದೆ.

**ಚೆಕ್ ಟ್ರಂಕೇಷನ್ / ಚೆಕ್ಕಿನ ಬಿಂಬ ವರ್ಗಾವಣೆ [Cheque Truncation]**

ಚೆಕ್ಕುಗಳ ತೀರುವಳಿ ವ್ಯವಸ್ಥೆಯಲ್ಲಿ (Clearing System) ಇದೊಂದು ಮಹತ್ವದ ಹೆಜ್ಜೆ. ತೀರುವಳಿ ವ್ಯವಸ್ಥೆಯ ಕಾರ್ಯಕ್ಷಮತೆಯನ್ನು ಹೆಚ್ಚಿಸಲು ರಿಸರ್ವ್ ಬ್ಯಾಂಕ್ 'ಚೆಕ್ಕಿನ ಬಿಂಬ ವರ್ಗಾವಣೆ ವ್ಯವಸ್ಥೆ' ಯನ್ನು ಜಾರಿಗೆ ತಂದಿದೆ. ಈ ವ್ಯವಸ್ಥೆಯಲ್ಲಿ ಗ್ರಾಹಕನು ನೀಡಿದ ಚೆಕ್ಕು ಅದು ಪಾವತಿಯಾಗಬೇಕಾದ ಬ್ಯಾಂಕಿಗೆ ಹೋಗಬೇಕಾದುದಿಲ್ಲ. ಚೆಕ್ಕಿನ ಹಣವನ್ನು ವಸೂಲಿ ಮಾಡಿಕೊಳ್ಳಬೇಕಾಗಿರುವ ಬ್ಯಾಂಕು ಪಾವತಿ ಪಡೆಯಲು ಆ ಚೆಕ್ಕನ್ನು ಪಾವತಿಗೆ ಕಳಿಸುವುದಿಲ್ಲ; ಚೆಕ್ಕಿನ ಬಿಂಬವನ್ನು ವಿದ್ಯುನ್ಮಾನ ರೂಪದಲ್ಲಿ ಪಾವತಿದಾರ ಬ್ಯಾಂಕಿನ ಸೇವಾಶಾಖೆಗೆ ಕಳಿಸುತ್ತದೆ. ಕಾಗದದ ರೂಪದಲ್ಲಿರುವ (ಭೌತಿಕ) ಚೆಕ್ಕು ವಸೂಲಿದಾರ ಬ್ಯಾಂಕಿನಲ್ಲಿಯೇ ಉಳಿಯುತ್ತದೆ. ಪರಕ್ರಾಮ್ಯ ಸಂಲೇಖಗಳ ಅಧಿನಿಯಮದ 6ನೇ ಪ್ರಕರಣಕ್ಕೆ (ಚೆಕ್ಕಿನ ವ್ಯಾಖ್ಯೆ) ತಿದ್ದುಪಡಿ ತಂದು ವಿದ್ಯುನ್ಮಾನ ಚೆಕ್ಕು (Electronic Cheque) ಗಳನ್ನು ಮಾನ್ಯಮಾಡಲಾಗಿದೆ.

**ಬಿಂಬ ವರ್ಗಾವಣೆ ಹೇಗೆ?**

- ವಸೂಲಿದಾರ ಬ್ಯಾಂಕು ಚೆಕ್ಕಿನ ಎರಡೂ ಬದಿಗಳನ್ನು (ಮುಂಭಾಗ ಮತ್ತು ಹಿಂಭಾಗ) ಸ್ಕ್ಯಾನ್ ಮಾಡಿ ಬಿಂಬಗಳನ್ನು ಪಡೆದುಕೊಂಡು ಆ ಮಾಹಿತಿಯನ್ನು ಅಂಕೀಯ ರೂಪದಲ್ಲಿ (digital form) ದಾಖಲಿಸಿಕೊಳ್ಳುತ್ತದೆ.
- ಚೆಕ್ಕಿನ ಬಿಂಬಗಳು ಮತ್ತು ಅಂಕಿರೂಪದ ದತ್ತಾಂಶಗಳನ್ನು ತೀರುವೆ ಮನೆ (clearing house)ಗೆ ಕಳಿಸುತ್ತದೆ. ಹೀಗೆ ಕಳಿಸಲು ತೀರುವೆ ಮನೆಗೆ ಸಂಬಂಧಿಸಿದ ತಂತ್ರಾಂಶವನ್ನು ರಿಸರ್ವ್ ಬ್ಯಾಂಕು ಎಲ್ಲ ಬ್ಯಾಂಕುಗಳಿಗೆ ಒದಗಿಸಿದೆ.
- ತೀರುವಳಿ ಮನೆಯಲ್ಲಿ ಈ ದತ್ತಾಂಶವನ್ನು ಸಂಸ್ಕರಿಸಿ ಪ್ರತಿಯೊಂದು ಬ್ಯಾಂಕಿಗೆ ನೀಡಬೇಕಾದ / ಬ್ಯಾಂಕಿನಿಂದ ಪಡೆಯಬೇಕಾದ ತೀರುವೆ ಮೊತ್ತವನ್ನು ನಿರ್ಧರಿಸುತ್ತದೆ. ಚೆಕ್ಕುಗಳಿಗೆ ಸಂಬಂಧಿಸಿದ ಎಲ್ಲ ಮಾಹಿತಿಯನ್ನೂ ಪಾವತಿದಾರ

ಬ್ಯಾಂಕುಗಳಿಗೆ ರವಾನಿಸಲಾಗುತ್ತದೆ.

- ಪಾವತಿದಾರ ಬ್ಯಾಂಕುಗಳು ತೀರುವೆ ಮನೆಗೆ ಸಂಬಂಧಿಸಿದ ತಂತ್ರಾಂಶವನ್ನು ಬಳಸಿಕೊಂಡು ಈ ದತ್ತಾಂಶವನ್ನು ಸ್ವೀಕರಿಸಿ ಚೆಕ್ಕುಗಳ ಪಾವತಿ ಮಾಡುತ್ತವೆ. (ಅಗತ್ಯವಾದಲ್ಲಿ ಚೆಕ್ಕುಗಳನ್ನು ಪಾವತಿ ಮಾಡದೆ ಹಿಂದಿರುಗಿಸಲು ಅವಕಾಶವಿದ್ದೇ ಇದೆ)

**ಅನುಕೂಲತೆಗಳು :** ಚೆಕ್ಕುಗಳ ವಸೂಲಾತಿ ಶೀಘ್ರವಾಗಿ ಗ್ರಾಹಕರಿಗೆ ತ್ವರಿತ ಸೇವೆ, ತೀರುವೆಗೆ ಸಂಬಂಧಿಸಿದ ವಂಚನೆಗಳು ತಗ್ಗುವಿಕೆ,ಚೆಕ್ಕುಗಳ ವಸೂಲಿ ವೆಚ್ಚ ಕಡಿಮೆಯಾಗುವುದು, ವಹಿವಾಟುಗಳನ್ನು ತಾಳೆಮಾಡುವುದಕ್ಕೆ ಸಂಬಂಧಿಸಿದ ಸಮಸ್ಯೆಗಳ ನಿವಾರಣೆ, ಮಾರ್ಗದಲ್ಲಿ ಚೆಕ್ಕುಗಳು ಕಳೆದುಹೋಗುವ ಪ್ರಸಂಗ ಬಾರದಿರುವುದೇ ಮುಂತಾದ ಅನುಕೂಲತೆಗಳಿಂದ ಚೆಕ್ಕಿನ ಬಿಂಬ ವರ್ಗಾವಣೆ ಬ್ಯಾಂಕುಗಳಿಗೂ ಗ್ರಾಹಕರಿಗೂ ವರದಾನವೆನಿಸಿದೆ. ಇತ್ತೀಚಿನ ವರ್ಷಗಳಲ್ಲಿ ಭಾರತದ ಎಲ್ಲ ಮಹಾನಗರಗಳಲ್ಲಿ ಈ ಚೆಕ್ ಟ್ರಂಕೇಷನ್ ಮೂಲಕ ತೀರುವಳಿ ವ್ಯವಸ್ಥೆ ಜಾರಿಯಲ್ಲಿದೆ.

### ಆರ್.ಟಿ.ಜಿ.ಎಸ್. / ನಿಧಿಗಳ ತಾತ್ಕ್ಷಣಿಕ ಸ್ಥೂಲ ಇತ್ಯರ್ಥ [Real Time Gross Settlement]

ಅಂತರ ಬ್ಯಾಂಕ್ ಹಣ ವರ್ಗಾವಣೆಯ ವಿಧಾನಗಳಲ್ಲಿ ಸದ್ಯದಲ್ಲಿ ಲಭ್ಯವಿರುವ ಅತ್ಯಂತ ತ್ವರಿತವಾದದ ವಿಧಾನವೇ 'ನಿಧಿಗಳ ತಾತ್ಕ್ಷಣಿಕ ಸ್ಥೂಲ ಇತ್ಯರ್ಥ' [RTGS : Real Time Gross Settlement]. ಈ ವ್ಯವಸ್ಥೆಯಲ್ಲಿ ವಹಿವಾಟುಗಳನ್ನು ಬಿಡಿಬಿಡಿಯಾಗಿ [individually] ನಿರ್ವಹಿಸಿ ತೀರುವಳಿ ಮಾಡಲಾಗುತ್ತದೆ, ಅನೇಕ ವಹಿವಾಟುಗಳನ್ನು ಒಟ್ಟಾಗಿ ಸೇರಿಸಿ ಅಲ್ಲ. ಇದೊಂದು ರಾಷ್ಟ್ರವ್ಯಾಪಿಯಾದ ವ್ಯವಸ್ಥೆಯಾಗಿದ್ದು ಈ ಯೋಜನೆಯಲ್ಲಿ ಭಾಗವಹಿಸುವ ಎಲ್ಲ ಬ್ಯಾಂಕುಗಳೂ ಈ ಸೌಲಭ್ಯವನ್ನು ಬಳಸಿಕೊಳ್ಳಬಹುದು. ದಿನದ ನಿರ್ದಿಷ್ಟ ಸಮಯದಲ್ಲಿ ನಿರಂತರವಾಗಿ ಈ ಸೇವೆ ಲಭ್ಯವಾಗುತ್ತದೆ.

#### ಈ ವ್ಯವಸ್ಥೆಯಲ್ಲಿ

- ಪಾವತಿ ಆದೇಶಗಳನ್ನು ಯಾವುದೇ ವಿಳಂಬವಿಲ್ಲದೆ ತತ್ ಕ್ಷಣ ಜಾರಿಗೊಳಿಸಲಾಗುವುದು. ಎಂದರೆ, ಹಣ ರವಾನೆ ಮಾಡುವವರ ಖಾತೆಗೆ ಖರ್ಚುಹಾಕಿದ ಕೆಲವೇ ಕ್ಷಣಗಳಲ್ಲೇ ಪ್ರಾಪ್ತಿಕರ್ತನ ಬ್ಯಾಂಕ್ ಖಾತೆಗೆ ಹಣ ಜಮಾ ಆಗುತ್ತದೆ. ಪ್ರತಿಯೊಂದು ಪಾವತಿ/ ಜಮಾ ಸೂಚನೆಯನ್ನೂ ಬಿಡಿಯಾಗಿ ನಿರ್ವಹಿಸಲಾಗುತ್ತದೆ.
- ಪ್ರತಿಯೊಂದು ಬ್ಯಾಂಕಿಗೂ ಒಂದು ಸಂಕೇತಪದವನ್ನು [IFS Code] ನೀಡಲಾಗುತ್ತದೆ. ಈ ಸಂಕೇತ ಪದವು 11 ಅಕ್ಷರಾಂಕಗಳನ್ನು [alpha numerals] ಹೊಂದಿದ್ದು ಮೊದಲಿನ 4 ಅಕ್ಷರಗಳು, ಮುಂದಿನವು ಅಂಕಿಗಳು. [ಉದಾ: SBIN0003357]. ಹಣ ರವಾನೆ ಮಾಡುವ ಮತ್ತು ಹಣ ಪಡೆಯುವ ಬ್ಯಾಂಕನ್ನು ನಿಖರವಾಗಿ ಸೂಚಿಸಲು ಈ ಕೋಡ್ ನ ಬಳಕೆ ನೆರವಾಗುತ್ತದೆ.
- ವಹಿವಾಟಿನ ನಿರ್ವಹಣೆ ಮತ್ತು ಚುಕ್ತಾ ಮಾಡುವ ಕಾರ್ಯ ದಿನದ ನಿರ್ದಿಷ್ಟ ಸಮಯಗಳಲ್ಲಿ [RTGS Day] ನಿರಂತರವಾಗಿ ಚಾಲ್ತಿಯಲ್ಲಿರುತ್ತದೆ. ಮಾಡಿದ ಪಾವತಿ ಅಂತಿಮ, ಇದನ್ನು ಬದಲಾಯಿಸಲು ಸಾಧ್ಯವಿಲ್ಲ. ಹಣವು ಖಾತೆಗೆ ಜಮಾ ಆದ ಕೂಡಲೇ ಪ್ರಾಪ್ತಿಕರ್ತನು ಅದನ್ನು ಬಳಸಿಕೊಳ್ಳಬಹುದು.
- ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ತಮ್ಮ ಪ್ರಾಯೋಜಕ ಬ್ಯಾಂಕುಗಳ ಸದಸ್ಯತ್ವವನ್ನು ಬಳಸಿಕೊಂಡು ಈ ಸೇವೆ ಸಲ್ಲಿಸಬಹುದು. ಅಂತರ್ಜಾಲ ಬ್ಯಾಂಕಿಂಗ್ ಸೌಲಭ್ಯ ಹೊಂದಿದ ಬ್ಯಾಂಕ್ ಗ್ರಾಹಕರು ನೇರವಾಗಿ ಈ ಸೌಲಭ್ಯ ಬಳಸಿ ಹಣ ವರ್ಗಾಯಿಸಬಹುದು. ಈ ವ್ಯವಸ್ಥೆಯ ಮೂಲಕ 2 ಲಕ್ಷ ರೂ. ಅಥವಾ ಅದಕ್ಕೂ ಮೇಲ್ಪಟ್ಟ ಮೊತ್ತವನ್ನು ಮಾತ್ರ ವರ್ಗಾವಣೆ ಮಾಡಬಹುದು.

### ನೆಫ್ಟ್ : ರಾಷ್ಟ್ರೀಯ ವಿದ್ಯುನ್ಮಾನ ನಿಧಿ ವರ್ಗಾವಣೆ [National Electronic Funds Transfer]

ಹಣ ರವಾನೆಗೆ ಇದು ಇನ್ನೊಂದು ಸುಲಭ ವಿದ್ಯುನ್ಮಾನ ವ್ಯವಸ್ಥೆ. RTGS ವ್ಯವಸ್ಥೆಗೂ ಇದಕ್ಕೂ ಒಂದೆರಡು ವ್ಯತ್ಯಾಸಗಳಿವೆ.

1. ಈ ವ್ಯವಸ್ಥೆಯಲ್ಲಿ ವಹಿವಾಟುಗಳನ್ನು ಬಿಡಿಬಿಡಿಯಾಗಿ ನಿರ್ವಹಿಸುವುದಿಲ್ಲ. ವಹಿವಾಟುಗಳು ಪಾವತಿದಾರ ಬ್ಯಾಂಕಿನ ಸೇವಾಶಾಖೆಗೆ ಆಗಿಂದಾಗ್ಗೆ ರವಾನೆಯಾಗುತ್ತದೆ. ಒಂದು ಗಂಟೆಯ ಅವಧಿಯಲ್ಲಿ ನಡೆದ ಎಲ್ಲ ವಹಿವಾಟುಗಳನ್ನು ಸೇರಿಸಿ ಒಟ್ಟು ಹಣವನ್ನು ಒಂದೇ ಬಾರಿಗೆ ತೀರುವೆ (settlement) ಮಾಡಲಾಗುತ್ತದೆ. ಅದ್ದರಿಂದ ಹಣದ ರವಾನೆ ತತ್ಕ್ಷಣ ಆಗುವುದಿಲ್ಲ. ಉದಾ : 11 ಗಂಟೆಯಿಂದ 12 ಗಂಟೆಯವರೆಗೆ ನಡೆಸಿದ ವಹಿವಾಟುಗಳು ಸೇರಿ ಒಟ್ಟು ರೂ.30,75,000/– ಆಗಿದ್ದರೆ, 12 ಗಂಟೆ ಆದಕೂಡಲೇ ಆ ಒಟ್ಟು ಮೊತ್ತ (ಪ್ರಾಪ್ತಿಕರ್ತ ಬ್ಯಾಂಕಿಗೆ) ವರ್ಗಾವಣೆಯಾಗುತ್ತದೆ. ಅದಾದ ಮರುನಿಮಿಷವೇ ನಡೆಸಿದ ವಹಿವಾಟು ಚುಕ್ತಾ ಆಗಲು 1ಗಂಟೆಯವರೆಗೆ ಕಾಯಬೇಕು. ಆದರೆ RTGS ವ್ಯವಸ್ಥೆಯಲ್ಲಿ ಪ್ರತಿಯೊಂದು ವಹಿವಾಟೂ ತತ್ಕ್ಷಣದಲ್ಲೇ ಚುಕ್ತಾ ಆಗಿಬಿಡುತ್ತದೆ.
2. ರಾಷ್ಟ್ರೀಯ ವಿದ್ಯುನ್ಮಾನ ನಿಧಿ ವರ್ಗಾವಣೆ [NEFT] ಮೂಲಕ ನಡೆಸಿದ ರವಾನೆಗಳು ಸಾಮಾನ್ಯವಾಗಿ ಅದೇ ದಿನ 2 ಗಂಟೆಗಳೊಳಗೆ ಇನ್ನೊಂದು ಬ್ಯಾಂಕಿನಲ್ಲಿರುವ ಗ್ರಾಹಕನ ಖಾತೆಗೆ ಜಮಾ ಆಗುತ್ತವೆ. ಆದರೆ ದಿನದ ಕೊನೆಯ ತಂಡದ ವಹಿವಾಟುಗಳು ಜಮಾ ಆಗುವುದು ಮರುದಿನವೇ. ಭಾನುವಾರ ರಜೆ ಇರುವುದರಿಂದ ಶನಿವಾರದ ಕೊನೆಯ ತಂಡದ ವಹಿವಾಟುಗಳು ಸೋಮವಾರ ಬೆಳಗ್ಗೆ ಜಮಾ ಆಗುತ್ತವೆ.
3. ಈ ನಿಧಿ ವರ್ಗಾವಣೆ ವ್ಯವಸ್ಥೆಯಲ್ಲಿ 2 ಲಕ್ಷ ರೂ.ಗಿಂತ ಸಣ್ಣ ಮೊತ್ತಗಳನ್ನು ವರ್ಗಾಯಿಸಬಹುದು.

ಈ ಎರಡೂ ವ್ಯವಸ್ಥೆಗಳ ಮೂಲಕ ಹಣ ವರ್ಗಾಯಿಸಲು ಚೆಕ್ ಅಥವಾ ನಗದಿನ ಜತೆಗೆ ಒಂದು ಜಮಾಪತ್ರದಲ್ಲಿ ಪ್ರಾಪ್ತಿಕರ್ತನ ಖಾತೆ ಸಂಖ್ಯೆ, ಪ್ರಾಪ್ತಿಕರ್ತನು ಹೊಂದಿರುವ ಬ್ಯಾಂಕ್/ಶಾಖೆಯ IFS ಸಂಕೇತ, ವರ್ಗಾಯಿಸಬೇಕಾದ ಮೊಬಲಗು, ವರ್ಗಾವಣೆ ಮಾಡುವವರ ವಿಳಾಸ, ಮೊಬೈಲ್ ಸಂಖ್ಯೆ/ಇ–ಅಂಚೆ ವಿಳಾಸ – ಈ ವಿವರಗಳನ್ನು ತುಂಬಿ ಶಾಖೆಗೆ ಕೊಡಬೇಕಾಗುವುದು; ಖಾತೆಯಿಂದಲೂ ವರ್ಗಾಯಿಸಬಹುದು. ಇಂಟರ್‌ನೆಟ್ ಬಳಕೆಯ ಪರಿಚಯವುಳ್ಳ ಗ್ರಾಹಕರು ತಮ್ಮ ಮನೆ/ಕಚೇರಿಗಳಿಂದಲೇ ಗಣಕ/ ಮೊಬೈಲ್ ಮೂಲಕ ಆರ್.ಟಿ.ಜಿ.ಎಸ್. / ನೆಫ್ಟ್ ವಹಿವಾಟುಗಳನ್ನು ನಡೆಸಬಹುದು.

# ಸ್ಪರ್ಧಾತ್ಮಕ ಸಹಕಾರಿ ಪ್ರಶ್ನೋತ್ತರಗಳು – ಓದಿ ಉತ್ತರಿಸಿ

**1. ಭಾರತದ ರಾಷ್ಟ್ರೀಯ ಕಾಂಗ್ರೆಸ್‌ನ 'ಜನಕ' ಎನ್ನಿಸಿದವರು ಯಾರು?**

ಎ) ಎ.ಓ. ಹ್ಯೂಮ್

ಬಿ) ಮಹಾತ್ಮ ಗಾಂಧಿ

ಸಿ) ಪಂಡಿತ್ ಜವಾಹರ್ ಲಾಲ್ ನೆಹರೂ

ಡಿ) ಲೋಕಮಾನ್ಯ ತಿಲಕರು

**2. ಗಾಂಧೀಜಿಯವರು ಖಾದಿಯನ್ನು ಇದರ ಸಂಕೇತವೆಂದು ಪರಿಗಣಿಸಿದ್ದರು**

ಎ) ಕೈಗಾರಿಕೀಕರಣ

ಬಿ) ನೈತಿಕ ಶುದ್ಧತೆ

ಸಿ) ಪರಾವಲಂಬನೆ

ಡಿ) ಧಾರ್ಮಿಕ ಪ್ರಗತಿ

**3. ಭಾರತದ ಪ್ರಧಾನಿ ಶ್ರೀ ನರೇಂದ್ರ ಮೋದಿಯವರು ರೂ.500 ಮತ್ತು 1000 ರೂ. ನೋಟುಗಳ ಅಮಾನ್ಯೀಕರಣ ಮಾಡಿದ್ದು ಯಾವಾಗ?**

ಎ) ನವೆಂಬರ್ 2015

ಬಿ) ನವೆಂಬರ್ 2017

ಸಿ) ಅಕ್ಟೋಬರ್ 2017

ಡಿ) ನವೆಂಬರ್ 2016

**4. ಪುಲಿಟ್ಜರ್ ಪ್ರಶಸ್ತಿಯನ್ನು ಈ ಕ್ಷೇತ್ರದಲ್ಲಿ ಮಾಡಿದ ಸಾಧನೆಗೆ ನೀಡಲಾಗುತ್ತದೆ**

ಎ) ಪತ್ರಿಕೋದ್ಯಮ, ಸಾಹಿತ್ಯ ಮತ್ತು ಸಂಗೀತ ರಚನೆ

ಬಿ) ಸಾಹಸೋದ್ಯಮ, ಪರ್ವತಾರೋಹನ

ಸಿ) ಸಾಕ್ಷರತೆ ಮತ್ತು ಶಿಕ್ಷಣ

ಡಿ) ಸಾಮಾನ್ಯ ಸ್ವಾಸ್ಥ್ಯ, ಆರೋಗ್ಯ ಮತ್ತು ವೈದ್ಯಕೀಯ

**5. ಇವರುಗಳ ಪೈಕಿ ಭಾರತದ ಪ್ರಸಿದ್ಧ ಗಣಿತಜ್ಞರು ಯಾರು?**

ಎ) ಜಗದೀಶ್ ಚಂದ್ರ ಬಸು

ಬಿ) ಸರ್ ಸಿ.ವಿ. ರಾಮನ್

ಸಿ) ಭರತ ಮುನಿ

ಡಿ) ವರಾಹ ಮಿಹಿರ

**6. 'ಐಲ್ಯಾಂಡ್ಸ್ ಆಫ್ ಲ್ಯಾಂಗರ್ ಹ್ಯಾನ್ಸ್' ಎಲ್ಲಿದೆ?**

ಎ) ಮಾನವ ದೇಹದಲ್ಲಿ

ಬಿ) ಲಕ್ಷದ್ವೀಪ ಸಮೂಹದಲ್ಲಿ

ಸಿ) ಎಲ್ಲ ಪ್ರಾಣಿಗಳ ಹೃದಯದಲ್ಲಿ

ಡಿ) ಭಾರತದ ದಕ್ಷಿಣಾಗ್ನೇಯ ದಿಕ್ಕಿನಲ್ಲಿ

**7. ಮಲೇಷಿಯಾದ ರಾಜಧಾನಿ ಯಾವುದು?**

ಎ) ಪಟ್ಟಾಯ

ಬಿ) ಬ್ಯಾಂಕಾಕ್

ಸಿ) ಜಕಾರ್ತ

ಡಿ) ಕೌಲಾಲಂಪುರ

**8. ಇವುಗಳಲ್ಲಿ ಯಾವ ಖಂಡವು ದಕ್ಷಿಣಾರ್ಧ ಗೋಳದಲ್ಲಿದೆ?**

ಎ) ಆಸ್ಟ್ರೇಲಿಯಾ

ಬಿ) ಯೂರೋಪ್

ಸಿ) ಏಷ್ಯಾ

ಡಿ) ಅಮೆರಿಕಾ

**9. ಗ್ರಹಣಗಳ ವಿಷಯದಲ್ಲಿ ಈ ಮುಂದಿನ ಯಾವ ಹೇಳಿಕೆ ತಪ್ಪು?**

ಎ) ಅವು ಅಮಾವಾಸ್ಯೆ ಅಥವಾ ಪೂರ್ಣಿಮೆಗಳಲ್ಲಿ ಮಾತ್ರ ಸಂಭವಿಸುತ್ತವೆ

ಬಿ) ಅಮಾವಾಸ್ಯೆಯಲ್ಲಿ ಚಂದ್ರಗಹಣವಾಗಲು ಸಾಧ್ಯವಿಲ್ಲ

ಸಿ) ಗ್ರಹಣಗಳು ಸಮುದ್ರದ ನೀರಿನ ಮೇಲೆ ಪ್ರಭಾವ ಬೀರುತ್ತವೆ

ಡಿ) ಅವು ಯವಾಗ ಬೇಕಾದರೂ ಸಂಭವಿಸಬಹುದು

**10. ಕರ್ನಾಟಕದಲ್ಲಿ ಆಶ್ವಯುಜ ಮಾಸದಲ್ಲಿ ಮಾಸದಲ್ಲಿ ಸಂಭ್ರಮದಿಂದ ಆಚರಿಸುವ ಹಬ್ಬವಿದು:**

ಎ) ದೀಪಾವಳಿ

ಬಿ) ಯುಗಾದಿ

ಸಿ) ದಸರಾ

ಡಿ) ಸಂಕ್ರಾಂತಿ

**ಹಿಂದಿನ ಸಂಚಿಕೆಯ ಪ್ರಶ್ನೆಗಳಿಗೆ ಉತ್ತರಗಳು :**

1 -B, 2 -A , 3 –D , 4 –C, 5 – C, 6 – B, 7 – A, 8 – B, 9 –D , 10 – C